# ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ಜನವರಿ 2009 | ಆಂತರಿಕ ಪ್ರಸಾರಕ್ಕಾಗಿ ಮಾತ್ರ | ಸಂಪುಟ 2 ಸಂಚಿಕೆ 1


ಪ್ರಿಯ ಸೋದರ ಸೋದರಿಯರೆ,

ಹೊಸ ವರ್ಷದ ಶುಭಾಶಯಗಳು ಮತ್ತು 2009ನೇ ವರ್ಷದಲ್ಲಿ ಎಖೋಸ್ ಇಂಡಿಯಾದ ಪ್ರಥಮ ಸಂಚಿಕೆಗೆ ನಿಮಗೆ ಸುಸ್ವಾಗತ.

2009ನೇ ವರ್ಷದಲ್ಲಿ ಮತ್ತು ಅದರಿಂದಾಚೆಗೂ ಸಹ ನಾವು ತಳೆಯಬೇಕಾದ ನಿರ್ಧಾರವನ್ನು ಗುರುಗಳು ನಮಗಿತ್ತಿದ್ದನ್ನು ಈ ಹೊಸವರ್ಷವು ಕಂಡಿದೆ. ಗುರುಗಳು ನೀಡಿದ ಉಪನ್ಯಾಸದ ಕೆಲವು ಭಾಗಗಳನ್ನು ಇಲ್ಲಿ ನಿಮಗಾಗಿ ತಂದಿದ್ದೇವೆ. ಗುರುಗಳ ಇತ್ತೀಚಿನ ಪ್ರವಾಸದ ವೈಶಿಷ್ಟ್ಯವೆಂದರೆ, ಅವರು ತಿರುಪ್ಪೂರ್, ಮಲಂಪುಳ, ತ್ರಿಷೂರ್, ಕೊಲ್ಕತ ಮತ್ತು ಖರಗಪುರಕ್ಕೆ ನೀಡಿದ ಭೇಟಿಗಳು.

ಅಭ್ಯಾಸಿಗಳು ನೈತಿಕ ಮೌಲ್ಯಗಳಾದ ಪ್ರೇಮ, ಕ್ಷಮಾಶೀಲತೆ, ಸಹಿಷ್ಣುತೆ ಮತ್ತು ಅನುಭೂತಿಗಳನ್ನು ಬೆಳೆಸಿಕೊಳ್ಳಬೇಕೆಂದು ನೀಡಿದ ಸಂದೇಶಕ್ಕೆ ಸ್ಪಂದಿಸಿ, ಈ ಮೌಲ್ಯಗಳನ್ನು ಚರ್ಚಿಸಿ, ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಅನುವಾಗುವಂತೆ ದೇಶಾದ್ಯಂತ ಅನೇಕ ಕೇಂದ್ರಗಳು ಕಾರ್ಯಕ್ರಮಗಳನ್ನು ಹಮ್ಮಿಕೊಂಡವು. ಈ ಸಂಚಿಕೆಯು ಅಭ್ಯಾಸಿ ತರಬೇತಿ ಕಾರ್ಯಕ್ರಮ, ಅಭ್ಯಾಸಿ ಸಮಾವೇಶ ಮತ್ತು ಇತ್ತೀಚಿನ ಪ್ರಕಟಣೆಗಳನ್ನೂ ಒಳಗೊಂಡಿದೆ. ಪ್ರಭಾ ಕೇಂದ್ರಗಳ ವಿಭಾಗದಲ್ಲಿ ಮಿಷನ್ನಿನ ಪ್ರಥಮ ಆಶ್ರಮವೆನಿಸಿಕೊಂಡ ತಿರುಪತಿ ಆಶ್ರಮದ ಬಗ್ಗೆ ಹೆಚ್ಚಿನ ವಿವರಗಳಿವೆ.

ಮಾರ್ಚ್ 2009 ಸಂಚಿಕೆಗೆ ಸುದ್ದಿ ಬರಹಗಳನ್ನು ಕಳುಹಿಸಲು ಕೊನೆಯ ದಿನಾಂಕ: 15/02/09. ಸುದ್ದಿ ಬರಹವನ್ನು ಸಮಾರಂಭದ ಭಾವಚಿತ್ರಗಳೊಂದಿಗೆ ದಯವಿಟ್ಟು ನಿಮ್ಮ ವಲಯ ಮುಖ್ಯಸ್ಥರ ಮೂಲಕ ಕಳುಹಿಸಿಕೊಡಿ.

ಸಂಪಾದಕ ಮಂಡಳಿ.

## ಗುರುಗಳ ಹೊಸ ವರ್ಷದ ಸಂದೇಶ

2009

(31/12/08ರಂದು ಅವರು ನೀಡಿದ ಉಪನ್ಯಾಸದ ಸಂಗ್ರಹ)

ಸಹಜಮಾರ್ಗದ ಅಭ್ಯಾಸಿಗಳಾಗಿ, ಮಾನವಜೀವನದಲ್ಲಿ ಏಕಮಾತ್ರ ಗುರಿ ಇರಬೇಕೆಂಬ ಪ್ರಜ್ಞೆ ನಮ್ಮಲ್ಲಿರಬೇಕು. ಆ ಗುರಿ ಯಾವುದೆಂದರೆ, ಮೊದಲು ಮುಕ್ತಿ, ಎರಡನೆಯದು ಸಾಕ್ಷಾತ್ಕಾರ ಮತ್ತು ಮೂರನೆಯ ಹಾಗೂ ಕೊನೆಯದೆಂದರೆ ದೈವದಲ್ಲಿ ಸಂಪೂರ್ಣ ಲಯ.

ಬಾಬೂಜಿ ಹೇಳಿರುವಂತೆ, ಇಂದಿನ ಜಗತ್ತಿನಲ್ಲಿ ಸಹಜಮಾರ್ಗವು ಮುಕ್ತಿಗೆ ಅತ್ಯಂತ ಸುಲಭ ಹಾಗು ಶೀಘ್ರತಮ ಮಾರ್ಗ. ಮುಂದಿನ ಗುರಿಗಳಾದ ಸಾಕ್ಷಾತ್ಕಾರ ಮತ್ತು ಲಯಾವಸ್ಥೆಗಳ ಸಾಧನೆಯು ಕಷ್ಟಕರವೆಂದೂ ಅವರು ಹೇಳಿದ್ದಾರೆ. ಆದರೆ, ಮಾನವ ವಿಕಾಸ ಮತ್ತು ಸಾಧನೆಗೆ ನಾವು ದೃಢ ನಿರ್ಧಾರ ತಾಳಬೇಕಾಗಿದೆ.

ನಾವು ಧರ್ಮ, ಸಂಸ್ಕೃತಿ, ಶಿಕ್ಷಣ, ಸಮಾಜಗಳ ಮೂಲಕ ಸೃಷ್ಟಿಸಿಕೊಂಡ ಸಕಲ ಭೇದಗಳನ್ನೂ ಮರೆತು ಅವನ್ನು ನಮ್ಮ ಮನಸ್ಸಿನಿಂದ ಹೊರಹಾಕಬೇಕು. ನೆನಪಿಡಿ, ಮಾನವ ಜೀವನವೆಂದು ನಾವು ಕರೆಯುವ ಇದರಲ್ಲಿ ನಮ್ಮೆಲ್ಲರನ್ನೂ ಒಗ್ಗೂಡಿಸುವುದೆಂದರೆ ನಮ್ಮೊಳಗಿರುವ ಆತ್ಮವೇ ಸರಿ. ಅದು ನಿರಂತರವಾಗಿ ಬೇರೆ ಎಲ್ಲರಲ್ಲಿರುವ ಆತ್ಮವೇ ಆಗಿದೆ. ದೇಹವು ಸಂಸ್ಕಾರಗಳಿಂದಾಗಿ ತಪ್ಪೆಸಗುತ್ತದೆ. ಪೂರ್ವಕಲ್ಪಿತ ಅಭಿಪ್ರಾಯ ಮತ್ತು ಪೂರ್ವಗ್ರಹಳಿಂದಾಗಿ ಮನಸ್ಸು ತಪ್ಪು





ಮಾಡುತ್ತದೆ. ಆತ್ಮವೆಂದೂ ತಪ್ಪು ಮಾಡದು.

ಆದ್ದರಿಂದ, ನೀವೆಲ್ಲರೂ ಒಂದು ನಿರ್ಧಾರ ಮಾಡಿರೆಂದು ನನ್ನ ವಿನಂತಿ– ಓ ನಾಥ, ನನ್ನನ್ನೇ ಕ್ಷಮಿಸಿಕೊಳ್ಳಲು ನನಗೆ ಸಹಾಯ ಮಾಡು; ಇತರರು ನನಗೆ ಮತ್ತು ಬೇರೆಯವರಿಗೆ, ಪರವಾಗಿ ಅಥವಾ ವಿರುದ್ಧವಾಗಿ ಏನನ್ನಾದರೂ ಮಾಡಿರುವವರೆಂದು ನಾನು ತಿಳಿದಿರುವೆನೋ ಅಥವಾ ಕಲ್ಪಿಸಿಕೊಂಡಿರುವೆನೋ, ಅದಕ್ಕಾಗಿ ನನ್ನ ಮೂಲಕ ಅವರೆಲ್ಲರನ್ನು ಕ್ಷಮಿಸಲು ಸಹಾಯ ಮಾಡು; ಈ ಜಗತ್ತಿನಲ್ಲಿ ಯಾವುದನ್ನು ಮಾನವ ಅಸ್ತಿತ್ವವೆಂದು ನಾವು ಕರೆಯುವೆವೊ, ಆ ದೈವೀಲೀಲೆ ನಡೆಸಲು ಮಾರ್ಗದರ್ಶನ ನೀಡುತ್ತಿರುವವರು ಗುರುದೇವರೇ ಎಂಬ ಪರಮ ಅರಿವು ನನಗಿರಲಿ.

## ಬೆಂಗಳೂರು



ಅಕ್ಟೋಬರ್ 31ರಂದು ಗುರುಗಳು ದುಬೈನಿಂದ ಬಂದಿಳಿದರು. ಕೆಲ ಅಭ್ಯಾಸಿಗಳು ಅವರನ್ನು ಬರಮಾಡಿಕೊಂಡ ನಂತರ, ಅವರು ಶುಭ ಎನ್‌ಕ್ಲೇವ್‌ನಲ್ಲಿರುವ ತಮ್ಮ ಮನೆಗೆ ತೆರಳಿದರು.

ನವೆಂಬರ್ 2 ಭಾನುವಾರದಂದು, ಗುರುಗಳು ಬೆಂಗಳೂರಿನ ಮೂರನೇ ಆಶ್ರಮವನ್ನು ಉದ್ಘಾಟಿಸಿ ಅದಕ್ಕೆ 'ಪರಂಧಾಮ'ವೆಂದು ನಾಮಕರಣ ಮಾಡಿದರು. ಅದೊಂದು ಕೆಂಪು ಇಟ್ಟಿಗೆಗಳ ಸುಂದರ ವಿನ್ಯಾಸದಿಂದ ರೂಪುಗೊಂಡ ಕಟ್ಟಡವಾಗಿದ್ದು, ನೆಲಮಹಡಿಯಲ್ಲಿ ಧ್ಯಾನ ಮಂದಿರ, ಪಾಕಶಾಲೆ, ಗ್ರಂಥಾಲಯ ಮತ್ತು ಕಚೇರಿಗಳಿವೆ. ಉಳಿದೆರಡು ಮಹಡಿಗಳಲ್ಲಿ ನಿವಾಸಿಗಳಿಗೆ 32 ಕೊಠಡಿಗಳು, ಎರಡು ಅತಿಥಿ ಕೋಣೆಗಳು ಮತ್ತು ಎರಡು ದೊಡ್ಡ ಶಯನಾಗಾರಗಳಿವೆ.

ಸತ್ಸಂಗದ ನಂತರ ಗುರುಗಳು ಪರಂಧಾಮದ ಬಗ್ಗೆ ಮಾತನಾಡಿ. ಹಾಗೆಂದರೆ ಈ ಜೀವನಕ್ಕೆ ಮತ್ತೆಂದೂ ಹಿಂತಿರುಗಿಬರದಂತಹ ಸ್ಥಳವೆಂದು ಅರ್ಥೈಸಿದರು. ಗುರುಗಳು ನಾಟ್ರಂಪಳ್ಳಿ ಆಶ್ರಮದಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿ ನಂತರ 12ರ ಬೆಳಿಗ್ಗೆ ಚೆನ್ನೈಗೆ ತೆರಳಿದರು.

## ತಿರುಪ್ಪೂರ್

ಗುರುಗಳು ಡಿಸೆಂಬರ್ 3ರಂದು ತಿರುಪ್ಪೂರಿಗೆ ಬಂದು, ಅಲ್ಲಿ ನೇರವಾಗಿ ವಜ್ರಮಹೋತ್ಸವ ಉದ್ಯಾನಕ್ಕೆ ತೆರಳಿದರು. ಹರ್ಷಭರಿತರಾಗಿದ್ದ ಅವರು, ಅಭ್ಯಾಸಿಗಳೊಡನೆ ಕೆಲಸಮಯ ಮಾತನಾಡುತ್ತ ಕುಳಿತರು. ಅವರು ತಮ್ಮ ವಾಸ್ತವ್ಯದುದ್ದಕ್ಕೂ ಉಲ್ಲಾಸದಿಂದಿದ್ದರು. ಒಂದು ವಾರಕ್ಕಿಂತಲೂ ಹೆಚ್ಚು ಕಾಲ ಅವರು ತಂಗುವರೆಂದು ಅರಿತ ಅಭ್ಯಾಸಿಗಳು ತಂಡೋಪತಂಡವಾಗಿ ಅಲ್ಲಿಗೆ ಬರುತ್ತಿದ್ದರು.

ಡಿಸೆಂಬರ್ 5ರಂದು ಬೆಳಿಗ್ಗೆ 6.30ಕ್ಕೆ ಗುರುಗಳು ಹೊಸ ಪಾಕಶಾಲೆಯನ್ನು ಉದ್ಘಾಟಿಸಿದರು. ಸುಮಾರು 2000 ಚದರ ಅಡಿ ವಿಶಾಲವಾಗಿರುವ ಇದನ್ನು ಮಣಪಾಕ್ಕಂ ಪಾಕಶಾಲೆಯ ಮಾದರಿಯಲ್ಲೇ ಕಟ್ಟಲಾಗಿದೆ. ಗುರುಗಳು ಹೇಳಿದ್ದೇನೆಂದರೆ, ಅವೇಳೆಯಲ್ಲಿ ಬರುವವರೇ ಅತಿಥಿಗಳು. ಅವರನ್ನು ಗೌರವದಿಂದ ಕಾಣಬೇಕು. ಪಡೆಯುವವನಿಗೆ ತೃಪ್ತಿ ನೀಡುವುದು ಅನ್ನದಾನ ಒಂದೇ. ಬಡಿಸುವವರು ಊಟ ಮಾಡುವವರಿಗೆ ಆದರದಿಂದ ಬಡಿಸಬೇಕು. ಅವರನ್ನು ಯೋಗ್ಯ ರೀತಿಯಲ್ಲಿ ಆಹ್ವಾನಿಸಬೇಕು. ಮೇಜಿನ ಮೇಲೆ ಊಟ ಬಡಿಸಿ ಎಲ್ಲರೂ ಬಂದು ತಿನ್ನಿರೆಂದು ಕರೆಯದೆ, ಆಹ್ವಾನಿತರನ್ನು ವ್ಯಕ್ತಿಗತವಾಗಿ ವಿಚಾರಿಸಿಕೊಳ್ಳಬೇಕು.



ಭಾನುವಾರದ ಸತ್ಸಂಗದ ನಂತರ, ಗುರುಗಳು ಧ್ಯಾನದ ವೇಳೆ ರಿಂಗಣಿಸುವ ಸೆಲ್ ಫೋನುಗಳ ಬಗ್ಗೆ ತೀಕ್ಷ್ಣವಾಗಿ ನುಡಿದರು, "ಅಭ್ಯಾಸಿಗಳಿಗೆ ಕಡೆಯ ಪಕ್ಷ ಇಷ್ಟೂ ವಿಧೇಯತೆ ಇಲ್ಲವೆಂದ ಮೇಲೆ ಆಶ್ರಮಕ್ಕೆ ಬರುವ ಉದ್ದೇಶವಾದರೂ ಏನು? ಸೆಲ್ ಫೋನಿನಲ್ಲೇ ಮುಳುಗಿರುವವರು ಇಲ್ಲಿಗೆ ಬರದೆ ಮನೆಯಲ್ಲೇ ಇದ್ದು ಕರೆ ಮಾಡಿಕೊಂಡಿರಬಹುದು."

ಗುರುಗಳು ಡಿಸೆಂಬರ್ 10ರಂದು ಉದುಮಲಪೇಟೆ ಗ್ರಾಮಕ್ಕೆ ಭೇಟಿ ನೀಡಿದರು. ಅಭ್ಯಾಸಿಗಳು ಉದುಮಲಪೇಟೆ ಬಳಿ ಒಂದು ಗ್ರಾಮದಲ್ಲಿ ಐದು ಎಕರೆ ಭೂಮಿಯನ್ನು ದೇಣಿಗೆಯಾಗಿ ನೀಡಿದ್ದು, ಅವರು ಗುರುಗಳನ್ನು ತುಂಬ ಉತ್ಸಾಹದಿಂದ ಬರಮಾಡಿಕೊಂಡರು. ಗುರುಗಳು ಅಭ್ಯಾಸಿಗಳಿಗೆ ಸ್ಪಂದಿಸುತ್ತ ಅಲ್ಲಿ ಸಾಕಷ್ಟು ಸಮಯವನ್ನು ಕಳೆದರು.

## ಮಲಂಪುಳ:



ಗುರುಗಳು ಕೇರಳದ ಮಲಂಪುಳದಲ್ಲಿರುವ ಎಸ್.ಎಮ್.ಎಸ್.ಎಫ್. ಪುನಶ್ಚೇತನ ಕೇಂದ್ರಕ್ಕೆ ಭೇಟಿ ನೀಡಿ ಡಿಸೆಂಬರ್ 17ರಿಂದ 20ರವರೆಗೆ ಅಲ್ಲಿದ್ದರು. ಇದು ಗುರುಗಳ ನಾಲ್ಕನೇ ಭೇಟಿಯಾಗಿದ್ದು, ಅವರು ಇಲ್ಲಿ ಉಳಿದುಕೊಂಡಿದ್ದು ಇದೇ ಮೊದಲ ಸಲ. 2008ರ ಪರಿಣಿತ ತರಬೇತಿ ಕಾರ್ಯಕ್ರಮ ಇಲ್ಲಿ ನಡೆಯಲಿದ್ದು, ಗುರುಗಳ ಜೊತೆ ಜಗತ್ತಿನಾದ್ಯಂತ ಬಂದ ಸುಮಾರು ನಲವತ್ತು ವಿದ್ಯಾರ್ಥಿಗಳ ತಂಡ ಹಾಗು ಸಂಘಟಕರೂ ಸಹ ಉಪಸ್ಥಿತರಿದ್ದರು.

ಗುರುಗಳು ಧ್ಯಾನಮಂದಿರವನ್ನು ಮತ್ತು ತಮ್ಮ ಕುಟೀರವನ್ನು ಉದ್ಘಾಟಿಸಿದರು. ನಿರಾಳ ಹಾಗು ಉಲ್ಲಾಸಭರಿತರಾಗಿದ್ದ ಅವರು ವಿದ್ಯಾರ್ಥಿ ಹಾಗು ಅಭ್ಯಾಸಿಗಳೊಡನೆ ಸಾಕಷ್ಟು ಸಮಯ ಮಾತುಕತೆಯಾಡುತ್ತಲಿದ್ದರು.

ಗುರುಗಳು ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಹೀಗೆ ನುಡಿದರು, "ಜನರು ಜಗತ್ತನ್ನು ಪರಿವರ್ತಿಸಲು ಆಧ್ಯಾತ್ಮಿಕ ಜೀವನಕ್ಕೆ ಪ್ರವೇಶಿಸಿದರೆ ಅವರು ಏನನ್ನೂ ಸಾಧಿಸುವುದಿಲ್ಲ. ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳಲು ಬರುವುದಾದರೆ, ಯಶಸ್ಸಿನ ಭರವಸೆ ಇದೆ. ಆದರೆ ನಿಮ್ಮನ್ನೂ ಪರಿವರ್ತಿಸಿಕೊಳ್ಳಲು ನೀವು ಕಾರ್ಯೋನ್ಮುಖರಾಗಬೇಕು."

## ತ್ರಿಷೂರು:

ಡಿಸೆಂಬರ್ 19ರಂದು ಗುರುಗಳು ಕೇರಳದ ತ್ರಿಷೂರಿನಲ್ಲಿರುವ ಪುಳಕ್ಕಲ್ಲಿನಲ್ಲಿ 'ಯೋಗಾಶ್ರಮ'ವೆಂದು ಹೆಸರಿಸಲಾದ ಧ್ಯಾನ ಮಂದಿರವನ್ನು ಔಪಚಾರಿಕವಾಗಿ ಉದ್ಘಾಟಿಸಿದರು. ಆಶ್ರಮವು ತ್ರಿಷೂರಿನಿಂದ ಐದು ಕಿ.ಮೀ ದೂರದಲ್ಲಿ ತ್ರಿಷೂರು ಕುನ್ನಂಕುಲಂ ರಸ್ತೆಯಲ್ಲಿದೆ. ಗುರುಗಳು ಸತ್ಸಂಗವನ್ನು ನಡೆಸಿ, ನಂತರ ಒಂದು ಉಪನ್ಯಾಸ ನೀಡಿದರು. ಹೃದಯದ ನುಡಿಯನ್ನು ಸ್ವೀಕರಿಸುವ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು. ಇದರಿಂದ, ನಿರಂತರ ಉಪಸ್ಥಿತಿಯು ಹೃದಯದಲ್ಲಿ ನಿಜವಾದ ನಿರಂತರ ಉಪಸ್ಥಿತಿಯಾಗಿಬಿಟ್ಟು ನಮ್ಮ ಕಲ್ಯಾಣಕ್ಕೆ ಅದು ಏಕಮಾತ್ರ ಪ್ರಾಮಾಣಿಕ ಮಾರ್ಗದರ್ಶಿಯಾಗಿರುತ್ತದೆ. ಸಮಾರಂಭದಲ್ಲಿ ಸುಮಾರು 1000 ಅಭ್ಯಾಸಿಗಳು ಸೇರಿದ್ದು, ಅವರಲ್ಲಿ ನಲವತ್ತು ಸಾಗರದಾಚೆಯ ಅಭ್ಯಾಸಿಗಳೂ ಇದ್ದರು – ಸತ್ಸಂಗದ ನಂತರ ಗುರುಗಳು ತಮಗಾಗಿ ವಿಶೇಷವಾಗಿ ವ್ಯವಸ್ಥೆಯಾಗಿದ್ದ ನಿವಾಸದಲ್ಲಿ ಅಭ್ಯಾಸಿಗಳೊಡನೆ ಕೆಲ ಕಾಲ ಕಳೆದರು.



## ಕೊಲ್ಕತ:



ಗುರುಗಳು ಚೆನ್ನೈನಿಂದ ಕೊಲ್ಕತಕ್ಕೆ ಡಿಸೆಂಬರ್ 25ರಂದು ಬಂದರು. ಅವರೊಡನೆ ಸುಮಾರು 35 ಅಭ್ಯಾಸಿ ಸಹಯಾತ್ರಿಗಳಿದ್ದರು. 26ರಂದು ಗುರುಗಳು ತಮ್ಮ ಕುಟೀರದ ಹೊರಗಿದ್ದ ಹುಲ್ಲು ಹಾಸಿನ ಮೇಲೆ ಕುಳಿತು ಕೊಲ್ಕತ ಆಶ್ರಮದ ಸುಂದರ ಪರಿಸರವನ್ನು ಆಸ್ವಾದಿಸುತ್ತ 'ನಮ್ಮ ಪ್ರತಿಯೊಂದು ಆಶ್ರಮವೂ ಒಂದು ಶಾಂತಿಯ ಓಯಸಿಸ್' ಎಂದು ನುಡಿದರು. ಇಂತಹ ಜಗತ್ತನ್ನು ಹೊರಗಡೆ ಏಕೆ ನಿರ್ಮಾಣ ಮಾಡಲಾಗುತ್ತಿಲ್ಲ ಎಂಬ ಪ್ರಶ್ನೆಗೆ ಉತ್ತರಿಸುತ್ತ ಅವರು ಹೇಳಿದರು: ನಾವು ಹಿಂದೊಮ್ಮೆ ಅನುಭವಿಸುತ್ತಿದ್ದ ಸಂತೋಷ, ತೃಪ್ತಿ ಉತ್ತಮ ಆರೋಗ್ಯವನ್ನು ಹಣದ ದುರಾಸೆಯು ಕೊಳ್ಳೆ ಹೊಡೆದಿದೆ.

ಡಿಸೆಂಬರ್ 29ರಂದು, ಬೆಂಗಳೂರಿನ ನಂತರದ ಎರಡನೆಯ ಕ್ರೆಸ್ಟ್‌ಗಾಗಿ ಗುರುಗಳು ಖರಗಪುರದಲ್ಲಿ ಶಂಕುಸ್ಥಾಪನೆ ನೆರವೇರಿಸಿದರು. ತಮ್ಮನ್ನು ಹಿಂಬಾಲಿಸುತ್ತಿದ್ದ ಜನಸಂದಣಿಯನ್ನು ನಿವಾರಿಸಲು ಗುರುಗಳು ನನ್ನನ್ನು ಆಧ್ಯಾತ್ಮಿಕವಾಗಿ ಅನುಸರಿಸಿ, ಬೇರೆ ವಿಧದಲ್ಲಿ ಅಲ್ಲ ಎಂದು ವಿನೋದವಾಗಿ, ಆದರೆ ನೇರವಾಗಿ ನುಡಿದು, ಅಲ್ಲಿನ ಐದು ಎಕರೆ ಪ್ರದೇಶದಲ್ಲಿ ಸುತ್ತಾಡಿದರು.






ಸತ್ಸಂಗದ ನಂತರ ಗುರುಗಳು ಮಾತನಾಡಿ ಹೊಣೆಗಾರಿಕೆಯ ವಿಷಯದಲ್ಲಿ ಹೀಗೆ ನುಡಿದರು: ಈ ಪ್ರಪಂಚದಲ್ಲಿ ಬೇರೆ ಯಾವುದೇ ಹೊಣೆಗಿಂತ, ನಮಗೆ ನಮ್ಮ(ಹೃದಯದ) ಮೇಲಿನ ಹೊಣೆಯೇ ಅತ್ಯಧಿಕ. ಭೋಜನಾನಂತರ ಗುರುಗಳು ಕೊಲ್ಕತಗೆ ತೆರಳಿ, ಮರುದಿನ ಮಧ್ಯಾಹ್ನ ಸುಮಾರು ನಲವತ್ತು ಅಭ್ಯಾಸಿಗಳೊಡನೆ ಚೆನ್ನೈಗೆ ಪ್ರಯಾಣಿಸುವ ವಿಮಾನವನ್ನೇರಿದರು.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ

ಜನವರಿ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 1


### ಸತ್ಖೋಲ್ ಅರ್ಜಿಗಳು 2009

2009ರ ಸಾಲಿಗೆ ಅರ್ಜಿಗಳು ಅಂತರ್ಜಾಲದಲ್ಲಿ ಲಭ್ಯವಿದೆ. ವಿಳಾಸ :

http://www.srcm.info/satkhol/satkhol_home.htm

**ವಸಂತದ ತಂಡಗಳು** – ಜನವರಿ ಇಂದ ಮಾರ್ಚ್(ತಂಡ 249 ರಿಂದ 259). ಜಾಲದಲ್ಲಿ ಅರ್ಜಿಗಳ ಸಂಸ್ಕರಣ ಆರಂಭವಾಗಿದೆ.

**ಬೇಸಿಗೆ ತಂಡಗಳು** – ಏಪ್ರಿಲ್‌ನಿಂದ ಜೂನ್(ತಂಡ 260 ರಿಂದ 271). ಜಾಲದಲ್ಲಿ ಅರ್ಜಿಗಳ ಸಂಸ್ಕರಣ ಜನವರಿ 10ರಿಂದ ಪ್ರಾರಂಭ

**ಶಿಬಿರದ ತಂಡಗಳು** – ಸೆಪ್ಟೆಂಬರ್‌ನಿಂದ ಡಿಸೆಂಬರ್ (ತಂಡ 272 ರಿಂದ 281). ಜಾಲದಲ್ಲಿ ಅರ್ಜಿಗಳ ಸಂಸ್ಕರಣ ಜೂನ್ 10ರಿಂದ ಪ್ರಾರಂಭ.

ಅರ್ಜಿಯನ್ನು ಭರ್ತಿಮಾಡುವ ಮುನ್ನ ಮಾರ್ಗದರ್ಶಿ ಸೂತ್ರಗಳನ್ನು ದಯವಿಟ್ಟು ಜಾಗರೂಕರಾಗಿ ಗಮನಿಸಿ.

ಅಂತರ್ಜಾಲ ಸೌಲಭ್ಯವಿಲ್ಲದವರು, ನಿಮ್ಮ ಪ್ರಶಿಕ್ಷಕ, ಕೇಂದ್ರದ ಮುಖ್ಯಸ್ಥ ಅಥವಾ ವಲಯದ ಮುಖ್ಯಸ್ಥರನ್ನು ಸಂಪರ್ಕಿಸಿ. ಪ್ರಶ್ನೆಗಳಿದ್ದರೆ ಸತ್ಖೋಲಿನ ಆಡಳಿತ ಕಚೇರಿಯನ್ನು ಬೆಳಿಗ್ಗೆ 10 ರಿಂದ 12 ಗಂಟೆ ಅಥವಾ ಮಧ್ಯಾಹ್ನ 3ರಿಂದ 4.30ರವರೆಗೆ ಸಂಪರ್ಕಿಸಿ. ದೂರವಾಣಿ: 044–2252 1099 ಅಥವ 044–4217 1111(ವಿಸ್ತರಣ/Ext: 218)

### ಹೊಸ ಪ್ರಕಟಣೆಗಳು




ಗುರುಗಳು ಜನವರಿ 1ರಂದು **'ಸಹಜಮಾರ್ಗ ಸಿದ್ಧಾಂತಗಳು ಸಂಪುಟ 14'** ರ ಇಂಗ್ಲೀಷ್ ಆವೃತ್ತಿಯನ್ನು ಬಿಡುಗಡೆ ಮಾಡಿದರು. ಈ ಸಂಪುಟದಲ್ಲಿ ಅವರು 1991ರ ಮೊದಲರ್ಧ ಭಾಗದಲ್ಲಿ ನೀಡಿದ ಸುಮಾರು ಇಪ್ಪತ್ತೈದು ಉಪನ್ಯಾಸಗಳು ಅಡಕವಾಗಿವೆ.

ಪುಸ್ತಕದಲ್ಲಿ 320 ಪುಟಗಳಿದ್ದು, ಗುರಿ, ಸ್ವಯಂಸೇವೆ, ನೋವನ್ನು ದಾಟಿ ಹೋಗುವುದು, ಮುಂದಾಳತ್ವ ಮತ್ತು ಗುರುಗಳು ಈ ವಿಷಯಗಳೂ ಸೇರಿದಂತೆ ಅನೇಕಾನೇಕ ವಿಚಾರಗಳನ್ನೊಳಗೊಂಡಿದೆ




1987ರಲ್ಲಿ ಪ್ರಕಟವಾದ **'ವೃಕ್ಷದ ಫಲ'** ಇಂಗ್ಲೀಷ್ ಆವೃತ್ತಿಯ ಎರಡನೆಯ ಸಂಪುಟ ಜನವರಿ 1ರಂದು ಪ್ರಕಟವಾಯಿತು. ಇದರಲ್ಲಿ ಗುರುಗಳು ನೀಡಿದ ಉಪನ್ಯಾಸಗಳು ಮತ್ತು ಪ್ರಶ್ನೋತ್ತರಗಳಿವೆ. ಈ ಉಪನ್ಯಾಸಗಳನ್ನು ಸೆಪ್ಟೆಂಬರ್–ಅಕ್ಟೋಬರ್ 1986ರಲ್ಲಿ ಇಟಲಿ, ಅಮೇರಿಕಾ ಮತ್ತು ಜರ್ಮನಿಯ ಪ್ರವಾಸ ಕಾಲದಲ್ಲಿ ನೀಡಲಾಗಿತ್ತು.




**'ಹೃದಯವಾಣಿ 2006'**ರ ಮರಾಠಿ ಆವೃತ್ತಿಯಲ್ಲಿ 2006ರ ಜನವರಿಯಿಂದ ಡಿಸೆಂಬರ್‌ವರೆಗೆ ಭಾರತ ಮತ್ತು ವಿದೇಶದ ವಿವಿಧ ಸ್ಥಳಗಳಲ್ಲಿ ಕೈಗೊಂಡ ದೀರ್ಘ ಪ್ರವಾಸದಲ್ಲಿ ನೀಡಿದ ಉಪನ್ಯಾಸಗಳ ಸಂಪೂರ್ಣ ಸಂಗ್ರಹವಿದೆ. ಗುರುಗಳು ತಿರುಪ್ಪೂರ್, ಬೆಂಗಳೂರು, ಚೆನ್ನೈ, ಅಹಮದಾಬಾದ್, ಕಾನ್ಪುರ, ಹೈದರಾಬಾದ್, ಪುಣೆ, ರಾಯಪುರ, ರೋಮ್, ಡೆನ್ಮಾರ್ಕ್, ಜರ್ಮನಿ, ಪ್ರೇಗ್, ದುಬೈ, ಸಿಂಗಾಪುರ ಮತ್ತು ಮಲೇಷಿಯಾಗಳಲ್ಲಿ ನೀಡಿದ ಸಂದೇಶಗಳಿವೆ.




**ನಿರಂತರ ಸ್ಮರಣೆಯ** ಜನವರಿ 2009ರ ಆಂಗ್ಲ ಸಂಚಿಕೆ ಶೀಘ್ರದಲ್ಲೇ ಪ್ರಕಟಗೊಳ್ಳಲಿದೆ. ಏಪ್ರಿಲ್ 2009ರ ಸಂಚಿಕೆಗೆ ನಿಗದಿಗೊಳಿಸಿರುವ ವಿಷಯ: ಕೃತಜ್ಞತೆ. ಈ ವಿಷಯದ ಮೇಲೆ ನಿಮ್ಮ ಬರಹಗಳಿಗೆ ಅಥವಾ ಸಹಜಮಾರ್ಗ ಪದ್ಧತಿ ಕುರಿತ ನಿಮ್ಮ ಅನಿಸಿಕೆಗಳಿಗೆ ಸುಸ್ವಾಗತ. ದಯವಿಟ್ಟು ಫೆಬ್ರುವರಿ 1ರ ಒಳಗೆ cr@srcm.org ಗೆ ಕಳುಹಿಸಿಕೊಡಿ.

### ಮಣಪಾಕ್ಕಂ ಆಶ್ರಮದಲ್ಲಿ ನೆರೆ

ನವೆಂಬರ್ 26ರಂದು, ಬಂಗಾಳ ಕೊಲ್ಲಿಯಲ್ಲಿ ಬಿರುಗಾಳಿ ಎದ್ದ ಕಾರಣ ಮಳೆ ಪ್ರಾರಂಭವಾಗಿ, ಸಂಜೆಯ ಹೊತ್ತಿಗೆ ಅದು ತೀವ್ರಗೊಂಡಿತ್ತು. ಮುಂಜಾಗ್ರತೆ ಕ್ರಮವಾಗಿ ಆಶ್ರಮ ನಿವಾಸಿಗಳೆಲ್ಲರನ್ನೂ ಆಶ್ರಮದ ಸುರಕ್ಷಿತ ಸ್ಥಳಗಳಿಗೆ ಕಳುಹಿಸಿ, ಅನೇಕ ಸಾಮಾನು ಸರಂಜಾಮುಗಳನ್ನು ರಕ್ಷಣೆಯ ದೃಷ್ಟಿಯಿಂದ ಎತ್ತರದ ಸ್ಥಳಗಳಿಗೆ ವರ್ಗಾಯಿಸಲಾಯಿತು.

27ರ ಸಂಜೆಯ ಹೊತ್ತಿಗೆ ಆಶ್ರಮ ನಿವಾಸಿಗಳನ್ನು ತೆರವುಗೊಳಿಸಲಾಗಿ, ಅವರು ಎದುರಿನಲ್ಲಿರುವ ಗಾರ್ಡನ್ ಆಫ್ ಹಾರ್ಟ್ಸ್‌ನಲ್ಲಿದ್ದ ಅಭ್ಯಾಸಿಗಳನ್ನು ಸೇರಿಕೊಂಡರು. ಮಧ್ಯರಾತ್ರಿಯ ಹೊತ್ತಿಗೆ (ಕುಟೀರ ಪ್ರದೇಶದಲ್ಲಿ) ಸಹಜ ನದಿಯು ಸೇತುವೆಯ ಮೇಲುಭಾಗದಲ್ಲಿ ಹರಿಯಲಾರಂಭಿಸಿ, ಪ್ರವಾಹ ಅಪಾಯ ಸೂಚಕವಾಗಿ ಏರತೊಡಗಿತು. ಸುಮಾರು 1.30ರ ವೇಳೆಗೆ ಸಿಂಹದ್ವಾರದ ಗೋಡೆ ಕುಸಿಯಿತು ಮತ್ತು ಕೆಲವೇ ನಿಮಿಷಗಳಲ್ಲಿ ಕುಟೀರದೊಳಗೆ ನೀರಿನ ಮಟ್ಟ ಸುಮಾರು ಒಂದೂವರೆ ಅಡಿಯಷ್ಟಿತ್ತು. ಆಶ್ರಮದ ಹಳೆಯ ಆರೋಗ್ಯ ಕೇಂದ್ರದ ಬಳಿಯ ಭಾಗಗಳು ಸುಮಾರು 12 ಅಡಿಯಷ್ಟು ನೀರಿನಲ್ಲಿ ಮುಳುಗಿಹೋಗಿದ್ದವು.

28ರ ಬೆಳಿಗ್ಗೆಯೂ ಸಹ ಮಳೆ ಕಡಿಮೆಯಾಗುವ ಸೂಚನೆ ಇರಲಿಲ್ಲ. ಅಕ್ಕಪಕ್ಕದ ಕೆರೆಗಳಿಂದ ಮತ್ತು ಅಡ್ಯಾರ್ ನದಿಯಿಂದ ಹರಿದು ಬರುತ್ತಿದ್ದ ನೀರಂತೂ ಸಮಸ್ಯೆಯನ್ನು ಉಲ್ಬಣಗೊಳಿಸುವಂತೆ ತೋರುತ್ತಿತ್ತು. ಮಧ್ಯಾಹ್ನದ ಹೊತ್ತಿಗೆ ರಾಯಪುರಂನ ಮೀನುಗಾರರು ತಮ್ಮ ದೋಣಿಗಳೊಡನೆ ಮತ್ತು ಕರಾವಳಿ ರಕ್ಷಣಾ ಪಡೆಯವರು ತಮ್ಮ ರಬ್ಬರ್ ತೇಲು ದೋಣಿಯೊಡನೆ ಆಶ್ರಮಕ್ಕೆ ಬಂದು ಸೇರಿದರು. ಇವರೆಲ್ಲರೂ ಕಾರ್ಯಪ್ರವೃತ್ತರಾಗಿ ಜಲಾವೃತ ಮನೆಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಸುಮಾರು ಐವತ್ತು ಜನರನ್ನು ರಕ್ಷಿಸಿದರು.

29ರ ಹೊತ್ತಿಗೆ ಧ್ಯಾನ ಮಂದಿರದ ಬಳಿ ಅನೇಕ ಪ್ರದೇಶಗಳಲ್ಲಿ ನೀರಿನ ಮಟ್ಟ ಇಳಿದು, ಗುರುಗಳು ತಪಾಸಣೆಗೆಂದು ಒಂದು ಭೇಟಿ ನೀಡಿದರು. ಅವರು ಗಾಯತ್ರಿಗೆ ಮರಳುವ ಮುನ್ನ ಎಲ್ಲೆಡೆ ಸುತ್ತಾಡಿ ಅನೇಕ ಸ್ಥಳಗಳನ್ನು ಪರಿಶೀಲಿಸಿದರು. 3ರಂದು ಆಶ್ರಮದಿಂದ ತಿರುಪ್ಪೂರಿಗೆ ಪ್ರಯಾಣಿಸಿದರು.

ತದನಂತರ ಭಾರತದಾದ್ಯಂತ ಸ್ವಯಂಸೇವಕರ ತಂಡಗಳು ಪ್ರವಾಹದಂತೆ ಹರಿದು ಬಂದು, ನಿರ್ಮಲೀಕರಣದ ಕೆಲಸವನ್ನು ಕೈಗೆತ್ತಿಕೊಂಡರು. ಶಯನಾಗಾರಗಳು, ಪಾಕಶಾಲೆ, ಶೌಚಾಲಯ ಮತ್ತಿತರ ಪ್ರದೇಶಗಳು ಸ್ವಯಂಸೇವಕರಿಂದ ಶುದ್ಧಗೊಂಡಿವೆ. ಈ ಮಧ್ಯೆ, ಆಶ್ರಮದ ಎಲ್ಲ ಸೌಲಭ್ಯಗಳು ಸ್ಥಗಿತಗೊಂಡಿದ್ದವು.

ಡಿಸೆಂಬರ್ 31ರಂದು ನೆರೆದಿದ್ದ ಅಭ್ಯಾಸಿಗಳ ಉಪಸ್ಥಿತಿಯಲ್ಲಿ ಗುರುಗಳು ಆಶ್ರಮದ ಪಾಕಶಾಲೆ ಮತ್ತು ಕ್ಯಾಂಟೀನಿಗೆ ಪುನಶ್ಚಾಲನೆ ನೀಡಿದರು. ಸಂಜೆ ಧ್ಯಾನ ಮಂದಿರದಲ್ಲಿ ಒಂದು ಸಂಗೀತ ಕಚೇರಿ ಏರ್ಪಾಡಾಗಿತ್ತು. ಮಧ್ಯರಾತ್ರಿ ವೇಳೆಗೆ ಗುರುಗಳು ಧ್ಯಾನ ಮಂದಿರದಲ್ಲಿ ನಡೆಸಿದ ಸತ್ಸಂಗ ಅನಿರೀಕ್ಷಿತ. ಜನವರಿ 1ರ ಬೆಳಿಗ್ಗೆ 9 ಗಂಟೆಗೂ ಸಹ ಅವರು ಸತ್ಸಂಗ ನಡೆಸಿ ನಂತರ ಒಂದು ಉಪನ್ಯಾಸ ನೀಡಿದರು. ಆಶ್ರಮ ಈಗ ಎಂದಿನಂತೆ ಕಂಗೊಳಿಸುತ್ತಿದ್ದು, ಹಿಂದಿನ ನಿಯಮಗಳಂತೆ ಅಭ್ಯಾಸಿಗಳಿಗೆ ಮುಕ್ತವಾಗಿದೆ. ಈ ಸ್ಥಿತಿಗೆ ಮರಳಲು ವ್ಯವಸ್ಥಿತ ಸಹಕಾರ – ಪರಿಶ್ರಮವೇ ಕಾರಣ.

Master's Cottage



Dining Area



ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ವಲಯ ಸುತ್ತುವರಿ
ಜನವರಿ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 1

## ಜೈಪುರದಲ್ಲಿ ಉನ್ನತ ತರಬೇತಿ ಕಾರ್ಯಕ್ರಮ

2008ರ ನವೆಂಬರ್ 30ರಂದು ಜೈಪುರದ ಝೋನಲ್ ಆಶ್ರಮದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಹತ್ತು ವಿವಿಧ ಕೇಂದ್ರಗಳಿಂದ ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲದಿಂದ ಸಹಜಮಾರ್ಗ ಸಾಧನೆ ಮಾಡುತ್ತಿದ್ದ ಸುಮಾರು 85 ಅಭ್ಯಾಸಿಗಳು ಇದರಲ್ಲಿ ಪಾಲ್ಗೊಂಡಿದ್ದರು. ನಿರಂತರ ಸ್ಮರಣೆ, ಮಿಷನ್ನಿನ ಸಾಹಿತ್ಯ ಪಠಣದ ಮಹತ್ವ, ಆಧ್ಯಾತ್ಮಿಕ ಪ್ರಗತಿಗೆ ಅಗತ್ಯವಾದ ಸದಾಚಾರ ಮತ್ತು ಮನೋಭಾವಗಳ ಅವಶ್ಯಕತೆ, ಪರಿವರ್ತನೆ, ಸ್ವಯಂಸೇವಕರ ಪಾತ್ರ, ದೈನಂದಿನ ಸಾಧನೆಯಲ್ಲಿ ತೋರಿಕೊಳ್ಳುವ ಸಾಮಾನ್ಯ ದೋಷಗಳು ಈ ವಿಷಯಗಳ ಮೇಲೆ ತರಗತಿಗಳು ನಡೆದವು. ಅಜಮೀರ ಕೇಂದ್ರದ ಅಭ್ಯಾಸಿಗಳು ಹೊಸ ಆಕಾಂಕ್ಷಿಗಳಿಗೆ ಸಹಜಮಾರ್ಗದ ಪರಿಚಯ ಈ ವಿಷಯದ ಮೇಲೆ ಒಂದು ಲಘು ನಾಟಕ ಪ್ರದರ್ಶಿಸಿದರು.

## ಬರೋಡಾದಲ್ಲಿ ಹೊಸ ಅಭ್ಯಾಸಿಗಳಿಗಾಗಿ ಕಾರ್ಯಕ್ರಮ



ವಡೋದರ ಆಶ್ರಮದಲ್ಲಿ ಅಕ್ಟೋಬರ್ 19 ಭಾನುವಾರದಂದು ಹೊಸ ಅಭ್ಯಾಸಿಗಳಿಗಾಗಿ ಒಂದು ತರಬೇತಿ ಕಾರ್ಯಕ್ರಮ ನಡೆಯಿತು. ಸಹಜಮಾರ್ಗ ಪದ್ಧತಿಯ ಮೂಲಭೂತ ವಿಷಯಗಳ ಮೇಲೆ ಬೆಳಕು ಚೆಲ್ಲುವುದೇ ಈ ಅರ್ಧ ದಿನದ ಕಾರ್ಯಕ್ರಮದ ಉದ್ದೇಶ. ಭಾಗವಹಿಸಿದ ಅಭ್ಯಾಸಿಗಳಲ್ಲಿ ಭ್ರಾತೃತ್ವ ಭಾವನೆ ಮೂಡಿಸಲು ಚೇತೋಹಾರಿ ಹಾಗೂ ಸ್ವಾರಸ್ಯಕರ ವಿಷಯಗಳಿದ್ದು ಅವು ಉತ್ತಮ ಪರಿಣಾಮವನ್ನುಂಟು ಮಾಡಿದವು. ಕಾರ್ಯಕ್ರಮದಲ್ಲಿ ಅಧಿಕ ಸ್ಪಂದನವಿರುವ ದೃಷ್ಟಿಯಿಂದ ಚರ್ಚೆಗಳು, ದೃಷ್ಟಾಂತಗಳು, ಪ್ರಾಯೋಗಿಕ ಅಭ್ಯಾಸಗಳು ಮತ್ತು ಪ್ರತಿಕ್ರಿಯೆಗಳನ್ನು ಹಮ್ಮಿಕೊಳ್ಳಲಾಗಿತ್ತು.



## ಷಹಜಹಾನಪುರದಲ್ಲಿ ಸಾಧನಾ ಕಾರ್ಯಕ್ರಮ

ಕೇಂದ್ರದ ಮುಖ್ಯಸ್ಥರಾದ ಸೋದರ ಸರ್ವೇಶಚಂದ್ರರಿಂದ ಉದ್ಘಾಟನೆಗೊಂಡ ಪ್ರಥಮ ಸಾಧನಾ ತರಬೇತಿ ಕಾರ್ಯಕ್ರಮ ಷಹಜಹಾನಪುರ ಆಶ್ರಮದಲ್ಲಿ ನವೆಂಬರ್ 12ರಿಂದ 16ರವರೆಗೆ ಹಿಂದಿ ಭಾಷೆಯಲ್ಲಿ ನಡೆಯಿತು. ತಮ್ಮ ಭಾಷಣದಲ್ಲಿ ಅವರು ಷಹಜಹಾನಪುರ ಆಶ್ರಮದ ಮಹತ್ವವನ್ನು ಒತ್ತಿ ಹೇಳಿ, ಬಾಬೂಜಿ ಮತ್ತು ಗುರುಗಳು ಬಯಸಿರುವಂತೆಯೆ ನಾವಾಗಲು, ಎಲ್ಲರೂ ಪ್ರಗತಿ ಹೊಂದಲು ಕರೆ ನೀಡಿದರು. ಅಭ್ಯಾಸಿಗಳು ತಮ್ಮ ಜೀವನದ ಐದು ಸಕಾರಾತ್ಮಕ ಮತ್ತು ನಕಾರಾತ್ಮಕ ಸಂಗತಿಗಳನ್ನು ಬರೆದು, ಅವನ್ನು ಸ್ವಯಂ ಮೌಲ್ಯಮಾಪನ, ಆತ್ಮ ಸ್ವೀಕೃತಿ ಮತ್ತು ಪರಿವರ್ತನೆ ದೃಷ್ಟಿಯಿಂದ ವಿಶ್ಲೇಷಿಸಲು ಪ್ರೇರಿಸಲಾಯಿತು.

ಆರು ತಂಡಗಳೂ ತಮ್ಮ ವಿಷಯಗಳನ್ನು ಚರ್ಚಿಸಿ, ನಂತರ ಸಾರಾಂಶವನ್ನು ಪ್ರಸ್ತುತ ಪಡಿಸಿದರು. ಸಂಚಾಲಕರು ಕೊನೆಯಲ್ಲಿ ವಿಷಯಗಳನ್ನು ಕ್ರೋಢೀಕರಿಸಿ, ಪ್ರಶ್ನೆಗಳಿಗೆ ಉತ್ತರ ನೀಡಿದರು.

## ಪೈತನಿನಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮ

ನವೆಂಬರ್ 9ರಂದು ಪೈತನಿನಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮ ನಡೆಯಿತು. ಇದು ಈ ಕೇಂದ್ರದಲ್ಲಿ ನಡೆದ ಮೊಟ್ಟ ಮೊದಲ ಕಾರ್ಯಕ್ರಮ. ಪೈತನ್, ಅಹಮದ್‌ನಗರ ಮತ್ತು ಸಮೀಪದ ಕೇಂದ್ರಗಳಿಂದ 143 ಅಭ್ಯಾಸಿಗಳು ಇದರಲ್ಲಿ ಪಾಲ್ಗೊಂಡಿದ್ದರು. ಸಹಜಮಾರ್ಗದ ಪರಿಚಯ, ಧ್ಯಾನ, ಸಹಜ ಮಾರ್ಗದ ಗುರುಗಳು, ಶುದ್ಧೀಕರಣ ಮತ್ತು ಅದರ ಮಹತ್ವ ಮುಂತಾದ ಅನೇಕ ವಿಷಯಗಳು ಚರ್ಚೆಗೊಂಡವು. ಎಲ್ಲ ವಕ್ತಾರರು ವಿಷಯಗಳನ್ನು ವಿವರಿಸಲು ಗಣಕ ತಂತ್ರಗಳನ್ನು ಪರಿಣಾಮಕಾರಿಯಾಗಿ ಬಳಸಿದ್ದರಿಂದ, ವಿಷಯವನ್ನು ಸ್ಪಷ್ಟವಾಗಿ ಅರಿತುಕೊಳ್ಳಲು ಅಭ್ಯಾಸಿಗಳಿಗೆ ಸಹಾಯವಾಯಿತು. ಮುಂಬಯಿ ಕೇಂದ್ರದ ಸೋದರ ತುಷಾರ ಪ್ರಧಾನ್ ಈ ಕಾರ್ಯಕ್ರಮದ ಸಂಚಾಲಕರು. ಸಭಿಕರ ಪ್ರತಿಕ್ರಿಯೆ ಉತ್ತಮವಾಗಿದ್ದು, ಎಲ್ಲರೂ ಕಾರ್ಯಕ್ರಮದ ಸಫಲತೆಯನ್ನು ಮನಗಂಡರು.

## ಅಹಮದಾಬಾದಿನಲ್ಲಿ ಯುವ ಸಂಕಿರಣ




ಇತ್ತೀಚೆಗೆ ಚೆನ್ನೈನಲ್ಲಿ ಗುರುಗಳು ಅಭ್ಯಾಸಿಗಳು ಚಾರಿತ್ರ್ಯ ನಿರ್ಮಾಣಕ್ಕೆ ಗಮನ ಕೊಡಿರೆಂದು ನೀಡಿದ ಭಾಷಣದ ನಿಮಿತ್ತ, ಅಹಮದಾಬಾದಿನಲ್ಲಿ ಡಿಸೆಂಬರ್ 14ರಂದು ನಡೆದ ಯುವ ಸಂಕಿರಣದಲ್ಲಿ 'ಆಧ್ಯಾತ್ಮಿಕ ಜೀವನಕ್ಕೆ ವೈಯಕ್ತಿಕ ಚಾರಿತ್ರ್ಯವು ಅಡಿಗಲ್ಲು' ಎಂಬುದನ್ನು ಮುಖ್ಯ ವಿಷಯವನ್ನಾಗಿ ನಿರ್ಧರಿಸಲಾಯಿತು. ಒಟ್ಟಿನಲ್ಲಿ, ಇದು ಅವರು ಆತ್ಮ ವಿಮರ್ಶೆ ಮಾಡಿಕೊಂಡು, ತಮ್ಮದೇ ಮೌಲ್ಯ ಮಾಪನ ಮಾಡಿ, ತಾವೇ ಸಂಕೀರ್ಣ ಮಾಡಿಕೊಂಡ ತಮ್ಮ ಬದುಕಿಗೆ ಪರಿಹಾರಗಳನ್ನು ಶೋಧಿಸಲು ಸಹಕಾರಿಯಾದ ಒಂದು ವೇದಿಕೆಯಾಗಿತ್ತು.

ಇದರ ಒಂದು ಮಹತ್ತರ ಲಾಭವೆಂದರೆ, ಮಿಷನ್ನಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಶ್ಯಕತೆಯನ್ನು ಮುಂದಿಟ್ಟಾಗ, ಡಜನ್‌ಗಟ್ಟಲೆ ಯುವಜನರು ನಿಯಮಿತವಾಗಿ ಸ್ವಯಂ ಸೇವೆಯಲ್ಲಿ ಭಾಗವಹಿಸಲು ಬದ್ಧರಾದರು. ಈ ಉತ್ಸಾಹ ಲವಲವಿಕೆಯನ್ನು 2009ರಲ್ಲಿ ಉಳಿಸಿಕೊಂಡು ಬೆಳೆಸುವುದು ಒಂದು ಪ್ರಮುಖ ಹೊಣೆ.

## ಬೆಳಗಾಂ ಜಿಲ್ಲೆಯ ಖಾನಾಪುರದಲ್ಲಿ ಅಭ್ಯಾಸಿ ತರಬೇತಿ ಕಾರ್ಯಕ್ರಮ

ಬೆಳಗಾಂನ 15 ಅಭ್ಯಾಸಿಗಳ ಒಂದು ತಂಡ, ಬೀದರಿನ ಸೋದರ ರಾಜು ಕಾಶಂಪೂರಕರ ಮತ್ತು ಖಾನಾಪುರದ ಹೊಸ ಅಭ್ಯಾಸಿಗಳು ಎಲ್ಲರೂ ಒಟ್ಟುಗೂಡಿದರು. ಅಭ್ಯಾಸಿಯಾಗಿರುವ ಪ್ರಾಂಶುಪಾಲರೊಬ್ಬರು ಈ ಸಮಾವೇಶಕ್ಕೆಂದು ತಮ್ಮ ಶಾಲೆಯನ್ನು ತೆರವು ಮಾಡಿಸಿಕೊಟ್ಟಿದ್ದರು.

ಕಾರ್ಯಕ್ರಮ ಚೆನ್ನಾಗಿ ನಡೆಯಿತು. ಮಿಷನ್ನಿನ ಮೌಲ್ಯಗಳನ್ನು ಸ್ವೀಕರಿಸುವಲ್ಲಿ ಅಭ್ಯಾಸಿಗಳು ಅಪರೂಪದ ಪಕ್ವತೆಯನ್ನು ಮೆರೆದರು, ಮತ್ತು ಸಹಜಮಾರ್ಗ ಸಾಧನೆಯ ಬಗ್ಗೆ ಉತ್ತಮ ಅರಿವು ಪ್ರದರ್ಶಿಸಿದರು. ಸತ್ಸಂಗದ ನಂತರ ಕಾರ್ಯಕ್ರಮ ಪ್ರಾರಂಭವಾಗಿ, ಮೊದಲು ಸೋ.ವಸ್ತ್ರದರು 'ಗುರುಗಳ ಆಯ್ಕೆ' ಸಂಗ್ರಹದಿಂದ ಒಂದು ಸುಮಧುರ ಗೀತೆಯನ್ನು ಪ್ರಸ್ತುತ ಪಡಿಸಿದರು. ಸಾಂಪ್ರದಾಯಿಕ ಅಭ್ಯಾಸಿ ತರಬೇತಿ ಕಾರ್ಯಕ್ರಮದ ಮಾದರಿಯಲ್ಲಿ ಈ ಕಾರ್ಯಕ್ರಮ ಬಹುಮಾಧ್ಯಮ ಸೌಲಭ್ಯಗಳನ್ನು ಬಳಸಿಕೊಂಡು ಕ್ರಮಬದ್ಧವಾಗಿ ನಡೆಯಿತು. ವಿವಿಧ ವಕ್ತಾರರು ಸಹಜಮಾರ್ಗ ಪದ್ಧತಿಯನ್ನು ಕುರಿತು ಮಾತನಾಡಿದರು. ಸಂಜೆ ಸತ್ಸಂಗದ ನಂತರ ಕಾರ್ಯಕ್ರಮ ಸಮಾರೋಪಗೊಂಡಿತು. ಅಭ್ಯಾಸಿಗಳು ಸಂತಸ ವ್ಯಕ್ತಪಡಿಸಿದರು ಮತ್ತು ಕೆಲವರು ಶೀಘ್ರವೇ ಗುರುಗಳ ದರ್ಶನ ಮಾಡುವ ಅಭಿಲಾಷೆ ತೋರಿದರು.

ಶ್ರೀ ರಾಮಚಂದ್ರ ಮಿಷನ್
# ಎಖೋಸ್ ಇಂಡಿಯ

ಜನವರಿ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 1


## ಬೋಧಕರಿಗಾಗಿ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ(ಮೌ.ಆ.ಶಿ)ಅಹಮದ್‌ನಗರ



ನವೆಂಬರ್ 7, 2008ರಂದು ಅಹಮದ್‌ನಗರ, ಮಹಾರಾಷ್ಟ್ರದಲ್ಲಿ ಒಂದು ಪ್ರಾಥಮಿಕ ಶಾಲೆಯಲ್ಲಿ ಮರಾಠಿ ಭಾಷೆಯ ಮೌ.ಆ.ಶಿ ಕಾರ್ಯಕ್ರಮ ನಡೆಯಿತು. ಅಲ್ಲಿ ರೂಢಿಯಂತೆ ಭಾನುವಾರದ ಸತ್ಸಂಗವು ನಡೆಯುತ್ತದೆ. ಸ. ವಿಶ್ವಾಸ್ ಟಿಲ್ಲುರವರು ಇಂದಿನ ಸಮಾಜದಲ್ಲಿ ಮೌಲ್ಯಗಳ ಅಗತ್ಯವನ್ನು ಒತ್ತಿ ಹೇಳಿದರು ಹಾಗೂ ಸ. ತುಷಾರ್ ಪ್ರಧಾನ್‌ರವರು ವಿವಿಧ ಶಾಲೆಗಳಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನು ಕೈಗೆತ್ತಿಕೊಂಡಿರುವುದು ಮತ್ತು ಎಸ್‌ಎಮ್‌ಆರ್‌ಟಿಐ ನವರು ಅನುಸರಿಸುವ ರೀತಿಗಳನ್ನೂ ವಿಷದೀಕರಿಸಿದರು.

ಮಹಾನಗರಗಳಿಗಿಂತಲೂ ಚಿಕ್ಕ ಪಟ್ಟಣಗಳಲ್ಲಿ ನೈತಿಕ ಮೌಲ್ಯಗಳ ಅನುಸರಣೆಯು ಉತ್ತಮವಾಗಿದೆ ಎಂಬುದಾಗಿ ತಿಳಿಯಲಾಗಿದೆ, ಆದರೆ ಭೇಟಿ ನೀಡುವ ತಂಡದವರ ಅನುಭವದಂತೆ, ದೂರದರ್ಶನ ಮತ್ತು ವಿವಿಧ ರೀತಿಯ ಮಾಧ್ಯಮಗಳಿಂದಾಗಿ ಸಣ್ಣ ಪಟ್ಟಣಗಳಲ್ಲಿಯೂ ಸಹ ಮಾನವೀಯ ಮೌಲ್ಯಗಳಿಗೆ ಬದ್ಧರಾಗಿರಬೇಕಾದುದು ಹೆಚ್ಚು ಪ್ರಾಮುಖ್ಯತೆಯುಳ್ಳದ್ದಾಗುತ್ತದೆ.

ಇಂದು ಹೆತ್ತವರು, ಬೋಧಕರು ಮತ್ತು ಶ್ರೀಮಂತ ವರ್ಗದವರು ಮಕ್ಕಳನ್ನು ಪೈಪೋಟಿ ಮತ್ತು ಜಿದ್ದಾಜಿದ್ದಿ ಸ್ಪರ್ಧೆಗಳಿರುವ ಜಗತ್ತಿಗೆ ನೂಕುತ್ತಿದ್ದಾರೆ ಎಂಬ ವಾಸ್ತವಿಕತೆಯನ್ನು ಉಪನ್ಯಾಸವು ಎತ್ತಿ ತೋರಿಸಿತು. ಮಾನವೀಯ ಮೌಲ್ಯಗಳನ್ನು ಉಳಿಸಿಕೊಳ್ಳುವುದು ಮತ್ತು ದಿನನಿತ್ಯದ ಪ್ರಾಪಂಚಿಕ ಒತ್ತಡಗಳನ್ನು ಸಮತೋಲನದಲ್ಲಿರಿಸಿಕೊಳ್ಳುವುದರ ಪ್ರಾಮುಖ್ಯತೆಯನ್ನು ಎತ್ತಿ ತೋರಬೇಕಾಗಿದೆ. ಮೌಲ್ಯಗಳನ್ನು ಬೋಧಿಸಿದರೆ ಅವು ಅನುಸರಿಸಲ್ಪಡುವುದು ಕಷ್ಟ ಎನ್ನುತ್ತದೆ ನುಡಿಮಾತು. ಮಕ್ಕಳ ವ್ಯಕ್ತಿತ್ವ ರೂಪಣದಲ್ಲಿ ಬೋಧಕರ ಮುಖ್ಯ ಪಾತ್ರವಿರುತ್ತದೆ ಮತ್ತು ಮಕ್ಕಳು ಅವರಲ್ಲಿ ಇರಿಸುವ ವಿಶ್ವಾಸವನ್ನಾಧರಿಸಿ ಅದನ್ನು ನಿರ್ಮಿಸಬೇಕಾದ ಮಹತ್ತರ ಹೊಣೆಯಿರುತ್ತದೆ.

ಹಲವು ಚಟುವಟಿಕೆಗಳು, ಪ್ರಯೋಗಗಳು ಮತ್ತು ಕತೆಗಳನ್ನು ಹೇಳಿ ಅಂತಹವುಗಳನ್ನು ಮೌಲ್ಯಗಳ ತಿಳುವಳಿಕೆ ನೀಡುವುದಕ್ಕಾಗಿ ಹೇಗೆ ಸಮಗ್ರಗೊಳಿಸ ಬಹುದೆಂಬುದನ್ನು ತೋರಿಸಿಕೊಡಲಾಯಿತು. ಸೂಕ್ತ ವಯಸ್ಸಿನಲ್ಲಿ ಸೂಕ್ತ ಮೌಲ್ಯಗಳ ಪ್ರಾಮುಖ್ಯತೆಯುಳ್ಳ ಎಸ್‌ಎಮ್‌ಆರ್‌ಟಿಐನ ಪಠ್ಯಕ್ರಮವನ್ನು ತೋರಲಾಯಿತು. ಉಪನ್ಯಾಸಗಳ ನಂತರ ಪ್ರಶ್ನೋತ್ತರಗಳಿದ್ದವು.

ಕಾರ್ಯಕ್ರಮ ನಡೆಸಿಕೊಟ್ಟಿದ್ದಕ್ಕಾಗಿ ಪ್ರಾಂಶುಪಾಲರು ಮತ್ತು ವಿಶ್ವಸ್ಥ ಸಮಿತಿಯ ಸದಸ್ಯರು ಆಭಾರವನ್ನು ತೋರಿದರು ಹಾಗೂ ಶಾಲೆಯ ಬೋಧಕರೊಬ್ಬರ ಧನ್ಯವಾದಾರ್ಪಣೆಯ ಭಾಷಣದ ಮೂಲಕ ಅದನ್ನು ವ್ಯಕ್ತಪಡಿಸಲಾಯಿತು.

### ಮಹತ್ತರ ಸಂಗತಿ

ಗುರುಗಳ ಖಾಸಗಿ ಸಂವಾದಗಳು ಮತ್ತು ಔಪಚಾರಿಕ ಮಾತುಕತೆಗಳನ್ನು ಅಧಿಕೃತ ಅನುಮತಿ ಇಲ್ಲದೆ ಶಬ್ದ ಅಥವಾ ದೃಶ್ಯ (ಆಡಿಯೊ,ವಿಡಿಯೊ) ದಾಖಲಿಸಲು ಅಭ್ಯಾಸಿಗಳಿಗೆ ಅನುಮತಿ ಇರುವುದಿಲ್ಲ. ಖಾಸಗಿ ಮಾತುಕತೆ ಮತ್ತು ಭೇಟಿಗಳ ದಾಖಲೆಗಳನ್ನು, ಪೂರ್ವಾನುಮತಿ ಇಲ್ಲದೆ ವೆಬ್ ಸೈಟ್‌ನಲ್ಲಿ ಪ್ರಚುರಗೊಳಿಸಬಾರದೆಂದು ಅಭ್ಯಾಸಿಗಳಿಗೆ ಸಲಹೆ ನೀಡಲಾಗಿದೆ.



## ರಾಣಿಗಂಜ್‌ನ ಬೋಧಕರು ಮತ್ತು ವಿದ್ಯಾರ್ಥಿಗಳಿಗೆ ಆ.ಮೌ.ಶಿಕ್ಷಣ

ನವೆಂಬರ್ 14 ಮತ್ತು 15ರಂದು ಜ್ಞಾನ ಭಾರತಿ ಶಾಲೆಯ ವಿನಂತಿಯ ಮೇರೆಗೆ ರಾಣಿಗಂಜ್ ಕೇಂದ್ರವು ವಿದ್ಯಾರ್ಥಿಗಳು ಮತ್ತು ಬೋಧಕರಿಗಾಗಿ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. ಅಂಡಾಳ್‌ನಿಂದ ಸ. ಅನಿಲ್, ಸ. ಪಂಕಜ್ ರಜತ್, ಸ. ವಿಜಯ್ ಚೌಧರಿ, ಸ. ಸುಶಾಂತ್ ಮತ್ತು ಸ. ಶೇಖರ್‌ರವರು ಕಾರ್ಯಕ್ರಮವನ್ನು ನಿಯೋಜಿಸಿದರು. 9ರಿಂದ 12ನೇ ತರಗತಿಗಳ ನಾಲ್ಕುನೂರು ವಿದ್ಯಾರ್ಥಿಗಳು ಸ್ಪಂದಿಸಿ, ಪ್ರತಿಕ್ರಿಯಿಸಿ ಸಂತೋಷಪಟ್ಟರು. ಪ್ರಾಂಶುಪಾಲರು ಮತ್ತು ಸಂಚಾಲಕರು ಪೂರ್ಣಾವಧಿ ಪ್ರಸ್ತುತರಿದ್ದರು. ಮುನ್ನೂರು ವಿದ್ಯಾರ್ಥಿಗಳಿಂದ ಪ್ರತಿಕ್ರಿಯೆಗಳನ್ನು ಪಡೆದು ಪ್ರಾಂಶುಪಾಲರಿಗೆ ನೀಡಿ ಶಾಲೆಯ ಉನ್ನತಿಗಾಗಿ ಅಂತಹ ಕಾರ್ಯಕ್ರಮಗಳ ಅಗತ್ಯವನ್ನು ಮನದಟ್ಟು ಮಾಡಲಾಯಿತು. ಅನೇಕ ದೃಶ್ಯ ಮಾಧ್ಯಮಗಳ ಮತ್ತು ಪ್ರಯೋಗಗಳ ಮೂಲಕ ಮೌಲ್ಯಾಧಾರಿತ ಶಿಕ್ಷಣದ ಬಗೆಗಿನ ಎಸ್‌ಎಮ್‌ಆರ್‌ಟಿಐನ ದೃಷ್ಟಿಕೋನಗಳನ್ನು ತಿಳಿಸಲಾಯಿತು.

ಮರುದಿನ ಬೋಧಕರ ಶಿಬಿರವಿದ್ದು ಎಸ್‌ಎಮ್‌ಆರ್‌ಟಿಐ ಸೂಚಿಸುವಂತೆ ದೃಶ್ಯ ಮಾಧ್ಯಮ ಮತ್ತು ಪ್ರಯೋಗಗಳನ್ನು ಬಳಸಲಾಯಿತು. ಎಲ್ಲರೂ ಅದು ಪ್ರಯೋಜನಕಾರಿ ಎಂದು ಕಂಡರು; ಅನೇಕರು ತಾವು ಉತ್ತಮ ಮಾನವ ಜೀವಿಗಳಾಗಿ, ಆದರಿಂದ ಉತ್ತಮ ಬೋಧಕರಾಗುವೆವೆಂದೂ ತಿಳಿಸಿದರು.

## ತಂದೆ ತಾಯಿಯರಿಗಾಗಿ ಮೌ.ಆ.ಶಿಕ್ಷಣ ರಾಂಚಿ ಕೇಂದ್ರ

ನವೆಂಬರ್ 25, 2008ರಂದು ರಾಂಚಿಯ ಲಾಲ್‌ಪುರದ ಗೃಹ ಸಂಕೀರ್ಣವೊಂದರಲ್ಲಿ 30 ಜನ ತಂದೆತಾಯಿಯರಿಗೆ ಮೌ.ಆ.ಶಿ ದ ಆಸಕ್ತಿ ತರಿಸುವ ಕಾರ್ಯಕ್ರಮವಿದ್ದಿತು. ಕಾರ್ಯಕ್ರಮದ ಉದ್ದೇಶವೆಂದರೆ, ಮಿಷನ್ನಿನ ಮೌ.ಆ.ಶಿ ಪಠ್ಯಕ್ರಮದ ಪ್ರಸ್ತುತತೆಯನ್ನು ಹಂಚಿಕೊಳ್ಳುವುದು ಹಾಗೂ ಭಾಗವಹಿಸಿದವರಿಗೆ ತಮ್ಮ ಮಕ್ಕಳಲ್ಲಿ ಸೂಕ್ತ ಮೌಲ್ಯಗಳನ್ನು ಉಂಟುಮಾಡಲು ಅವರ ಪಾತ್ರಗಳನ್ನೂ ತಿಳಿಸಿಕೊಡುವುದಾಗಿದ್ದಿತು. ಸಹೋದರಿಯರಾದ ಸುನಂದ ಚೌಹಾಣ್, ಅನಿತಾತಿವಾರಿ, ಅನುರಾಧ ಚೌಹಾಣ್, ಸಹೋದರರಾದ ಅರುಣ್ ಕುಮಾರ್ ಲಾಲ್, ಪವನ್ ಸಹಾಯ್ ಮತ್ತು ಮನೋಜ್ ತಿವಾರಿ ತಮ್ಮ ವಿಚಾರಗಳನ್ನು ತಿಳಿಸುತ್ತಾ ಶ್ರೋತೃಗಳಿಗೆ ವಿಷಯವನ್ನು ಪರಿಚಯಿಸಿದರು. ಪ್ರಯೋಗಗಳ ಮೂಲಕ ತಿಳಿಸಿಕೊಡುವಂತಹ ಸಂಕಿರಣವು ಕಾರ್ಯಕ್ರಮದ ಮುಖ್ಯಾಂಶವಾಗಿದ್ದಿತು.

ಈ ಪ್ರತಿಕ್ರಿಯೆಗಳಿಂದ ಭಾಗವಹಿಸಿದ್ದವರಲ್ಲಿ ಒಬ್ಬರು ಅಭ್ಯಾಸವನ್ನು ಆರಂಭಿಸಿದರು. ಶ್ರೋತೃಗಳಲ್ಲಿ ಮೂವರು ಬೋಧಕರಿದ್ದರು, ಅವರು ತಮ್ಮ ಶಾಲೆಗಳಿಗೆ ಇಂತಹ ಕಾರ್ಯಕ್ರಮಗಳ ಪ್ರಸ್ತುತತೆಯ ಸಂದೇಶವನ್ನು ಒಯ್ದರು. ಈ ಪ್ರತಿಕ್ರಿಯೆಯಿಂದಾಗಿ ಹಲವು ಶಾಲೆಗಳಲ್ಲಿ ಕ್ರಿಯಾಶೀಲತೆಯುಂಟಾಗಬಹುದೆಂದು ರಾಂಚಿ ಕೇಂದ್ರವು ನಿರೀಕ್ಷಿಸುತ್ತದೆ.



ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ

ಜನವರಿ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 1

## ದೇವೊರಿಯ ಆಶ್ರಮದ ಉದ್ಘಾಟನೆ



ದೇವೊರಿಯ(ಉ.ಪ್ರ)ದಲ್ಲಿ ಅಭ್ಯಾಸಿ ಸೋದರ ಸೋದರಿಯರ ದೈಹಿಕ ಹಾಗೂ ಆರ್ಥಿಕ ನೆರವಿನಿಂದಾಗಿ ಆಶ್ರಮದ ಕೆಲಸವು ಸಂಪೂರ್ಣಗೊಂಡು ಆಶ್ರಮವನ್ನು ಸ್ಥಾಪಿಸಲಾಗಿದೆ.

ನಿಯೋಜಿಸಿದ್ದಂತೆ ಸ. ಯು.ಎಸ್ ಬಾಜಪೈರವರು ವಲಯ ಸಂಚಾಲಕ ಸ. ನರಸಿಂಘ ವರ್ಮ ಹಾಗೂ ಘೋರಕಪುರದ ಪ್ರಶಿಕ್ಷಕ ಸ. ಎ ಕೆ ಸಿಂಘ್, ಸ. ಡಿ ಡಿ ಪಾಂಡೆ, ಸ. ರಮಾಶಂಕರ ದೀಕ್ಷಿತ್ ಮತ್ತು ವಿನೋದ ಮೋಹನ ಪಾಂಡೆಯವರು ಆಗಮಿಸಿ, ಟೇಪು ಕತ್ತರಿಸಿದ ನಂತರ ಮಂದಿರ ಪ್ರವೇಶ ಮಾಡಿದರು.

ಹತ್ತಿರದ ದೇವೊರಿಯ, ಸ. ಪಟ್ಟಿ, ಲಕ್ಷ್ಮೀಗಂಜ್, ಕಾಪ್ಟನ್ ಗಂಜ್, ಪಡ್ರೌನ, ಕಾಶ್ಯ(ಕುಸಿನಗರ), ನದವರ್‌ಘಾಟ್, ಖುಖುಂದ್, ಜಮ್ರಿಯ, ಸಿಸ್ವ ಕೇಂದ್ರಗಳಿಂದ ಸುಮಾರು 200 ಅಭ್ಯಾಸಿಗಳು ಸತ್ಸಂಗದಲ್ಲಿ ಪಾಲ್ಗೊಂಡರು.

ನಗರದ, ಗ್ರಾಮದ ವೈದ್ಯರು, ಇಂಜಿನಿಯರುಗಳು, ಪತ್ರಕರ್ತರು, ವಾಣಿಜ್ಯೋದ್ಯಮಿಗಳನ್ನೊಳಗೊಂಡ ಗಣ್ಯರು ಪ್ರಸ್ತುತರಿದ್ದು ಆಧ್ಯಾತ್ಮಿಕ ಸಭೆಯನ್ನು ಆಯೋಜಿಸಲಾಗಿತ್ತು. ಮೊದಲು ಸ. ರಮಾಶಂಕರ್‌ರವರು ಆಶ್ರಮದ ವಾಸ್ತು ಶಿಲ್ಪವನ್ನು ವಿವರಿಸಿದರು. ಸ. ವರ್ಮರವರು ಶ್ರೀ ರಾಮಚಂದ್ರ ಮಿಷನ್ನಿನ ಸಂಸ್ಥಾ ವಿವರಣೆ ನೀಡಿ ಗುರುಗಳು ಮತ್ತು ಮಿಷನ್ನಿನ ಉದ್ದೇಶಗಳನ್ನು ಪರಿಚಯಿಸಿದರು. ಸ. ಬಾಜಪೈರವರು ಆಧ್ಯಾತ್ಮಿಕತೆ ಏಕೆ? ಅದರ ಅಗತ್ಯವೇನು? ಹಾಗೂ ಮನಸ್ಸಿನ ಕ್ರಮಬದ್ಧತೆ ಮತ್ತು ನಿಯಂತ್ರಣ ಗಳನ್ನು ಸರಳ ಹಾಗೂ ಆಕರ್ಷಕ ರೀತಿಯಲ್ಲಿ ವಿವರಿಸಿದರು.

## ನಿವೇಶನದ ನೋಂದಣಿ, ಚಂದ್ರಾಪುರ ಕೇಂದ್ರ, ಮಹಾರಾಷ್ಟ್ರ

ಚಂದ್ರಾಪುರ ಕೇಂದ್ರದ ಅಭ್ಯಾಸಿಗಳಾದ ಸ. ಅಮರಸಿಂಘ ರಾಥೋಡ್ ಮತ್ತು ಸಹೋದರಿ ಸುಷ್ಮಿತ ರಾಥೋಡ್ ರವರು ಚಂದ್ರಾಪುರದ ಆಶ್ರಮಕ್ಕಾಗಿ ನಾಲ್ಕು ಎಕರೆ ಭೂಮಿಯನ್ನು ನೀಡಿದರು. ನವೆಂಬರ್ 26ರಂದು ಮಿಷನ್ನಿನ ಜಂಟಿ ಕಾರ್ಯದರ್ಶಿಗಳಾದ ಸಹೋದರ ಎ.ಪಿ.ದುರೈರವರು ವಲಯ ಸಂಚಾಲಕ ಸ. ಡಾ. ಸುಭಾಷ್ ವೈದ್ಯ ಹಾಗೂ ಕೇಂದ್ರ ಸಂಚಾಲಕ ಸ.ಎಲ್.ಕೆ.ಗೋಯಲ್‌ರವರ ಹಾಜರಿಯಲ್ಲಿ ಭೂಮಿಯ ನೋಂದಣಿ ಮಾಡಿದರು.

ಹೊಸದಾಗಿ ದೊರಕಿದ ಎಸ್.ಆರ್.ಸಿ.ಎಮ್‌ನ ಆಶ್ರಮದ ಕ್ಷೇತ್ರದಲ್ಲಿ ಸತ್ಸಂಗವನ್ನು ನಡೆಸಲಾಯಿತು. ಸ. ಎ.ಪಿ.ದುರೈರವರು ಮಾತನಾಡಿ ಕೊಡುಗೆಯನ್ನು ಶ್ಲಾಘಿಸಿದರು. ಗುರುಗಳಲ್ಲಿ ಅವರ ಕೃತಜ್ಞತೆಯು ತೋರಿಬರುತ್ತಿತ್ತು ಮತ್ತು ಅವರು ದಾನಿಗಳ ಔದಾರ್ಯ ಮತ್ತು ಪ್ರೇಮವನ್ನು ಸ್ವಾಗತಿಸಿದರು. ಭ್ರಾತೃತ್ವದ ಹೆಚ್ಚಳ ಹಾಗೂ ಸ್ವಯಂ ಸೇವೆಯಲ್ಲಿ ಹೆಚ್ಚಾಗಿ ಕೈಜೋಡಿಸಲು ವಿನಂತಿಸಿದರು.

ಹಿಂದಿನ ದಿನ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ಐಎನ್‌ಸಿ ಎಂಬಿಎ ಕಾಲೇಜಿನಲ್ಲಿ ಮುಕ್ತ ಸಭೆ ನಡೆಸಲಾಯಿತು. ಸುಮಾರು 150 ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸ.ಎ.ಪಿ.ದುರೈರವರು ಆಧ್ಯಾತ್ಮಿಕತೆಯನ್ನು ಅರಸುವಲ್ಲಿ ಜೀವಂತ, ಸಮರ್ಥ ಗುರುವಿನ ಪ್ರಾಮುಖ್ಯತೆಯನ್ನು ವಿವರಿಸಿದರು. ಸ. ವೈದ್ಯರವರು ಹಿಂದಿಯಲ್ಲಿ ಪದ್ಧತಿಯನ್ನು ವಿವರಿಸಿದರು.



## ಉತ್ತರಾಖಂಡದಲ್ಲೊಂದು ಚಿತ್ತಾಕರ್ಷಕ ಪ್ರಯೋಗ



ಗಂಗೋಲಿಹಾಟ್, ಅಲ್ಮೋರ ಮತ್ತು ರಾಣಿಖೇತ್‌ಗಳಿಂದ ಒಬ್ಬ ಪ್ರಶಿಕ್ಷಕ ಹಾಗೂ ಮೂರು ಅಭ್ಯಾಸಿಗಳ ತಂಡವು ವಿವಿಧ ಸ್ಥಳಗಳನ್ನು ಸಂದರ್ಶಿಸಿ ಮುಕ್ತ ಸಭೆಗಳ ಆಯೋಜನೆ, ದೀರ್ಘ ಕಾಲದಿಂದ ಪ್ರಶಿಕ್ಷಕರು ದೊರಕದ ಅಭ್ಯಾಸಿಗಳಿಗೆ ಬೈಠಕ್ ನೀಡುವುದು ಮತ್ತು ಒಂದಾದರೂ ಹೊಸ ಕೇಂದ್ರವನ್ನು ಪ್ರಾರಂಭಿಸುವ ಉದ್ದೇಶ ಹೊಂದಿದ್ದರು.

ಡಿಸೆಂಬರ್ 13ರಂದು ಅಲ್ಮೋರದಿಂದ ಹೊರಟ ನಾವು ಮೊದಲು ಗಂಗೋಲಿಹಾಟ್‌ನಲ್ಲಿ ನಿಂತೆವು; ಅಲ್ಲಿ ಸುಮಾರು 15 ಅಭ್ಯಾಸಿಗಳಿದ್ದಾರೆ. ಅಭ್ಯಾಸಿಗಳ ಮಿತ್ರರು ಮತ್ತು ಸಂಬಂಧಿಕರಿಗಾಗಿ ದಿನಾಂಕ 14ರಂದು ಮುಕ್ತ ಸಭೆ ನಡೆಸಲಾಯಿತು. ಸುಮಾರು 40 ಮಂದಿ ಹಾಜರಿದ್ದರು. ಮರುದಿನ ಆ ವಲಯದಲ್ಲಿ ಯಶಸ್ವೀ ಸರ್ಕಾರೇತರ ಸಂಸ್ಥೆ 'ಜಗ್ ರೆ ಪಹರಹ' ನ ಆಡಳಿತ ವರ್ಗದವರು ನಮಗೆ ಉಪನ್ಯಾಸ ನೀಡಲು ಆಹ್ವಾನಿಸಿದರು. ಅವರ ಕ್ಷೇತ್ರ ಕಾರ್ಯಕರ್ತರು, ಪರಿಶೀಲಕರು ಮತ್ತು ಗ್ರಾಮಸ್ಥರಿಗಾಗಿ ಆಧ್ಯಾತ್ಮಿಕತೆಯ ಬಗ್ಗೆ ಮಾಸಿಕ ಉಪನ್ಯಾಸಗಳನ್ನು ವ್ಯವಸ್ಥೆ ಮಾಡಲು ನಮ್ಮನ್ನು ವಿನಂತಿಸಿದರು.

ಡಿ. 15ರಂದು ಪಿತೋರ್‌ಘರ್‌ನ ಸುತ್ತಮುತ್ತಲಿನ ಅಭ್ಯಾಸಿಗಳನ್ನು ಭೇಟಿಮಾಡಿದೆವು. ಇತ್ತೀಚೆಗೆ ಮೆದುಳಿನ ಗೆಡ್ಡೆಯ ಶಸ್ತ್ರ ಚಿಕಿತ್ಸೆಗೊಳಗಾಗಿದ್ದ ಸಹೋದರಿಯೊಬ್ಬರನ್ನು ಚಂದಕ್ ಬಳಿ ಭೇಟಿಯಾದೆವು; ಆಕೆಯು ತನ್ನ ಮನೆಯಲ್ಲಿಯೇ ಬೈಠಕ್ ಪಡೆದು ಬಹುವಾಗಿ ಸಂತೋಷಪಟ್ಟರು. ನಾವು ಅತ್ಯಲ್ಪ ಕಾಲ ಥಾಲ್‌ನಲ್ಲಿ ತಂಗಿದೆವು ಹಾಗೂ ಎರಡು ವರ್ಷಗಳಿಂದ ಅಭ್ಯಾಸವನ್ನು ನಿಲ್ಲಿಸಿದ್ದ ಸಹೋದರಿಯೊಬ್ಬರನ್ನು ಭೇಟಿಯಾದೆವು. ಆಕೆಯು ಬೈಠಕ್ ಪಡೆದು ನಂತರ ಧ್ಯಾನವನ್ನು ಮತ್ತೆ ಮುಂದುವರಿಸುವ ದೃಢ ನಿರ್ಧಾರ ಕೈಗೊಂಡರು.

ಚೌಕೊರಿಯಲ್ಲಿ ರಾತ್ರಿ ತಂಗಿದೆವು; ವಿಜಯಪುರದಲ್ಲಿ ನಿಂತು ವಿಜಯಪುರ ಇಂಟರ್‌ಮೀಡಿಯೆಟ್ ಕಾಲೇಜಿನ ಆಡಳಿತ ವರ್ಗದವರನ್ನು ಭೇಟಿಯಾದೆವು. ವರ್ಗದವರಿಗೆ ಸಹಜಮಾರ್ಗ ಸಾಧನೆ ಹಾಗೂ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣದ ಬಗ್ಗೆ ಉಪನ್ಯಾಸ ನೀಡಿದೆವು.

ನಾವು ಗರುಹ ತಲುಪಿದಾಗ ಅಲ್ಲಿ ನಮ್ಮ ಪರಿಚಯಸ್ಥರನ್ನು ಭೇಟಿಯಾದೆವು. ಅವರಲ್ಲಿ ಮೂವರು ಅದೇ ರಾತ್ರಿ ಪ್ರಾರಂಭಿಕ ಬೈಠಕ್ ಪಡೆಯಲು ತೀರ್ಮಾನಿಸಿದರು. ಮರುದಿನ ನಾವು ಹಲವು ರೈತ ಅಭ್ಯಾಸಿಗಳನ್ನು ಗುರುತಿಸಿದೆವು ಮತ್ತು ಇನ್ನೂ ಹಲವರನ್ನು ಪ್ರವೇಶಗೊಳಿಸಲಾಯಿತು. ನಮ್ಮ ತಂಡದವರು ಇತ್ತೀಚಿನ ಪ್ರಕಟಣೆ ಆಡಿಯೊ, ವೀಡಿಯೊ, ಭಾವಚಿತ್ರಗಳು ಮತ್ತು ಮಿಷನ್ನಿನ ಪುಸ್ತಕಗಳನ್ನು ಒಯ್ದಿದ್ದೆವು; ಇವುಗಳನ್ನು ಅಭ್ಯಾಸಿಗಳು ಬಹು ಉತ್ಸಾಹದಿಂದ ಪಡೆದರು.

ಗುರುಗಳ ಕೃಪೆಯಿಂದ, 21ನೇ ಡಿಸೆಂಬರ್ ಭಾನುವಾರದಂದು ಹೊಸ ಕೇಂದ್ರ ಗರುಹದಲ್ಲಿ ಏಳು ಮಂದಿ ಸ್ಥಳೀಯ ಅಭ್ಯಾಸಿಗಳು ಸತ್ಸಂಗದಲ್ಲಿ ಭಾಗವಹಿಸಿದರು. ಈ ಕೇಂದ್ರಕ್ಕೆ ಅಲ್ಮೋರ/ರಾಣಿಖೇತ್‌ಗಳಿಂದ ಪ್ರಶಿಕ್ಷಕರ ಬೆಂಬಲವಿರುತ್ತದೆ.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ಜನವರಿ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 1

## ಸಿಕ್ಕಿಂನಲ್ಲಿ ಶ್ರೀ ರಾಮಚಂದ್ರ ಮಿಷನ್ನಿನ ಹೊಸ ಪ್ರಯೋಗ

ಸಿಕ್ಕಿಂನ ಗಾಂಗ್‌ಟಕ್‌ನಲ್ಲಿ ನವೆಂಬರ್ 8, 2008ರಂದು, ಸಿಕ್ಕಿಂ ಸರ್ಕಾರದಿಂದ ಪ್ರಾಯೋಜಿತವಾದ ಧ್ಯಾನದಿಂದ ಒತ್ತಡ ನಿರ್ವಹಣೆ ಎಂಬ ಕಾರ್ಯಕ್ರಮವನ್ನು ಸರ್ಕಾರಿ ಅಧಿಕಾರಿಗಳಿಗಾಗಿ ಎಸ್‌ಎಮ್‌ಆರ್‌ಟಿಐನವರು ಆಯೋಜಿಸಿದ್ದರು. ಅದನ್ನು ಮಿಷನ್ನಿನ ಪ್ರಶಿಕ್ಷಕರಾದ ಸ.ರವೀಂದ್ರ ತೆಲಂಗ್, ಕಾರ್ಯದರ್ಶಿ, ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆ ಇವರು ವ್ಯವಸ್ಥೆಗೊಳಿಸಿದ್ದರು.

ಉದ್ಘಾಟನಾ ಸಮ್ಮೇಳನದಲ್ಲಿ ಶ್ರೀ ಸೋಮನಾಥ ಪೌದ್ವಾಲ್, ವ್ಯವಸಾಯ ಮತ್ತು ತೋಟಗಾರಿಕೆಯ ಮಂತ್ರಿಗಳು ಮುಖ್ಯ ಅತಿಥಿಯಾಗಿದ್ದರು ಹಾಗೂ ಶ್ರೀ ಭೀಮ್ ಧುಂಗೆಲ್, ಶಾಸಕರು ಇವರು ಗೌರವ ಅತಿಥಿಯಾಗಿದ್ದರು. ಶ್ರೀ ಧುಂಗೆಲ್‌ರವರು ಸಿಕ್ಕಿಂ ಸಮಾಜದ ಇಂದಿನ ಪರಿಸ್ಥಿತಿಯ ಬಗ್ಗೆ ತಮ್ಮ ಗಾಢ ವ್ಯಾಕುಲತೆಯನ್ನು ತೋರ್ಪಡಿಸಿದರು. ರಾಜ್ಯದಲ್ಲಿ ಆತ್ಮಹತ್ಯೆಯ ಸಂಖ್ಯೆಯು ಬಹು ಹೆಚ್ಚಿರುವುದರ ಬಗ್ಗೆ ತಮ್ಮ ನೋವನ್ನು ವ್ಯಕ್ತಪಡಿಸಿದರು. ಗೌರವಾನ್ವಿತ ಮಂತ್ರಿಗಳು, ಈ ಕಾರ್ಯ್ಯಕ್ರಮವು ಸಮಾಜಕ್ಕೆ ಅತ್ಯಂತ ಅಗತ್ಯವಿರುವ ಸಂದರ್ಭದಲ್ಲಿ ವ್ಯವಸ್ಥೆಯಾದ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಡಾ. ಪರಿಪ್ಲವ್‌ರವರು, 'ಒತ್ತಡ–ವೈದ್ಯಕೀಯ ದೃಷ್ಟಿಕೋನ' ಎಂಬ ಬಗ್ಗೆ ಪ್ರಸ್ತಾವನೆ ನೀಡಿದರು. ಡಾ. ಅರುಣ್ ದಾವೆಯವರು ವಿಶ್ರಮಿಸುವ ತಂತ್ರಗಳನ್ನು ಪ್ರಾಯೋಗಿಕವಾಗಿ ನಿರೂಪಿಸಿದರು. ಇವರ ನಂತರ ಸ. ಜ್ಞಾನ್ ಸರಿನ್‌ರವರಿಂದ 'ಸಮತೋಲನದ ಅಸ್ತಿತ್ವ', ಈ ವಿಚಾರದ ಪ್ರಸ್ತುತಿ ಇದ್ದಿತು. ಸ. ತೆಲಂಗ್‌ರವರು ಸಹಜಮಾರ್ಗ ಧ್ಯಾನ ಪದ್ಧತಿಯ ಬಗ್ಗೆ ಕಿರುಪರಿಚಯ ನೀಡಿದರು; ಭಾಗವಹಿಸಿದ್ದವರಲ್ಲಿ 34 ಮಂದಿ ಸಾಧನೆ ಪ್ರಾರಂಭಿಸುವ ಆಶಯ ವ್ಯಕ್ತಪಡಿಸಿದರು.

ಮರುದಿನ 'ಸಾರ್ವತ್ರಿಕ ಮೌಲ್ಯಗಳು' ಈ ಬಗ್ಗೆ ಸಹೋದರಿ ಸೀತರವರೊಂದಿಗೆ ಸಂವಾದ, 'ಮನಸ್ಸಿನ ಕ್ರಮಬದ್ಧತೆ'ಯ ಬಗ್ಗೆ ಸ. ಸರಿನ್‌ರವರ ಉಪನ್ಯಾಸ ಮತ್ತು ಸ. ದಾವೆಯವರಿಂದ 'ಮಾನವ ಪರಿವರ್ತನೆ'ಯ ಬಗ್ಗೆ ಉಪನ್ಯಾಸಗಳಿದ್ದವು. ಅಂದಿನ ಕಾರ್ಯಕ್ರಮವು 'ದಿ ಟಚ್ ಆಫ್ ಮಾಸ್ಟರ್ಸ್ ಹ್ಯಾಂಡ್' ಎಂಬ ವಿಡಿಯೊ ದರ್ಶನದೊಂದಿಗೆ ಮುಕ್ತಾಯವಾಯಿತು, ಇದು ಸಭಿಕರ ಮನ ಕರಗಿಸಿತು.

ಮೂರನೆಯ ದಿನ ಸ. ದಾವೆಯವರು, ನಿರ್ವಹಣೆ ಎಂಬ ಬಗ್ಗೆ ಪ್ರಸ್ತುತ ಪಡಿಸುವಿಕೆಯಿಂದ ಆರಂಭವಾಯಿತು. ಸಹೋದರಿ ಸೀತಾರವರು ಧನಾತ್ಮಕ ಚಿಂತನೆ ಬಗ್ಗೆ ಉಪನ್ಯಾಸ ನೀಡಿದರು. ಪ್ರತಿಕ್ರಿಯೆಯ ಅಧಿವೇಶನದಲ್ಲಿ, ಭಾಗವಹಿಸಿದ್ದವರು ಇದೊಂದು ಶುಭ್ರ ಹವೆಯ ಶ್ವಾಸದಂತಿದ್ದಿತೆಂದೂ, ಬಹು ಆರಾಮದಾಯಕವಾಗಿದ್ದಿತೆಂದೂ ವ್ಯಕ್ತಪಡಿಸಿದರು. ಅದು ಅವರಲ್ಲಿ ಮಹತ್ವದ ಪರಿಣಾಮ ಬೀರಿ ಅವರೊಳಗೆ ಅನೇಕ ಬದಲಾವಣೆಗಳನ್ನೂ ಉಂಟುಮಾಡುವುದು. ಅನೇಕರು ಬೈಠಕ್‌ಗಳ ನಂತರ ತಮಗೆ ಹಗುರಾದ ಭಾವನೆ ಉಂಟಾಯಿತೆಂದು ತಿಳಿಸಿದರು.

## ನನ್ನಿಂದ ಅವರೆಡೆಗೆ ಆಂತರಿಕ ಪರಿವರ್ತನೆ

ತಿಪಟೂರು, ಡಿಸೆಂಬರ್ 13 ಮತ್ತು 14, 2008

ಸಹಜಮಾರ್ಗವು ಮಾನವನ ಪರಿಪೂರ್ಣತೆ ಹಾಗೂ ದೈವೀಕರಣದ ಗುರಿಯನ್ನು ತಲುಪಲು ಸ್ವ–ಪರಿವರ್ತನೆಯ ಮಾರ್ಗ ಎಂಬುದನ್ನು ಗುರುಗಳು ಪುನಃ ಪುನಃ ಒತ್ತಿ ಹೇಳಿದ್ದಾರೆ. ಈ ಉದ್ದೇಶಕ್ಕಾಗಿ ಬಳಸುವ ವಿವಿಧ ಸಾಧನಗಳೆಂದರೆ– ಧ್ಯಾನ, ಶುದ್ಧೀಕರಣ ಮುಂತಾದವು. ಈ ಉದ್ದೇಶಕ್ಕಾಗಿ ತಿಪಟೂರಿನ ಹೊಸ ಆಶ್ರಮದಲ್ಲಿ ಎರಡು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತಿಪಟೂರು, ಹಾಸನ, ತುಮಕೂರು, ಶಿವಮೊಗ್ಗ ಮತ್ತು ಭದ್ರಾವತಿಗಳಿಂದ ಸುಮಾರು 130 ಅಭ್ಯಾಸಿಗಳು ಭಾಗವಹಿಸಿದ್ದರು. ಮೊದಲ ದಿನ ಸತ್ಸಂಗದೊಂದಿಗೆ ಆರಂಭವಾಯಿತು. ನಂತರ 'ಧರ್ಮ ಮತ್ತು ಆಧ್ಯಾತ್ಮ' ಮತ್ತು 'ಗುರುಗಳ ಪಾತ್ರದ ಪ್ರಾಮುಖ್ಯತೆ' ಬಗ್ಗೆ ಸಹೋದರರಾದ ಬಿ.ಜಿ. ಸುಬ್ರಮಣ್ಯ ಮತ್ತು ಶ್ರೀನಿವಾಸ ಇವರಿಂದ ಉಪನ್ಯಾಸಗಳಿದ್ದವು. ಈ ಉಪನ್ಯಾಸಗಳು ನಿಜವಾಗಿ ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳುವಂತೆ ಮಾಡಿದವು. ನಾವಿಲ್ಲಿರುವ ಉದ್ದೇಶವೇನು? ಇವೆಲ್ಲದರಲ್ಲಿ ನಮ್ಮ ಗುರುಗಳ ಪಾತ್ರವೇನು? ಎಲ್ಲಕ್ಕೂ ಮುಖ್ಯವಾಗಿ ಇವೆಲ್ಲದರಲ್ಲಿ ನಮ್ಮ ಪಾತ್ರವೇನಾಗಿರಬೇಕು? ಸಾಧನೆ ಮಾಡಲು ಮನಸ್ಸಿದ್ದರೆ ಸಾಕೆ?

ಸಹೋದರಿ ಮಂಜುಳರವರ 'ಚಾರಿತ್ರ್ಯ ನಿರ್ಮಾಣ'ದ ಉಪನ್ಯಾಸವು ನಮ್ಮ ಕಡೆಯಿಂದ ಮಾಡಬಹುದಾದುದರ ಬಗ್ಗೆ ನಿಜವಾಗಿಯೂ ಕಣ್ತೆರೆಸುವಂತಹುದಾಗಿತ್ತು. ನಾವು ಆಗಬೇಕಾದಂತೆ ಆಗಲು ನಾವು ಮಾಡಬೇಕಾದುದರ ಬಗ್ಗೆ ನಾವು ಧ್ಯಾನಿಸುವಂತಾಯಿತು.

ಎರಡನೆಯ ದಿನದ ಕಾರ್ಯಕ್ರಮವು ಸಹಜಮಾರ್ಗ ಸಾಧನೆಗೆ ಸೀಮಿತವಾಗಿತ್ತು. ಸಾಧನೆ, ಶುದ್ಧೀಕರಣ ಮತ್ತು ಪ್ರಾರ್ಥನೆಯ ವಿವಿಧ ಅಂಶಗಳನ್ನೂ ವಿವರಿಸಿ, ಅಭ್ಯಾಸಿಗಳು ಕೇಳಿದ ಅನೇಕ ಪ್ರಶ್ನೆಗಳಿಗೆ ವಿವರಣೆ ನೀಡಲಾಯಿತು. ಕೊನೆಯ ಅಂಗವಾಗಿ 'ನಾನು ಮತ್ತು ನನ್ನ ಗುರುಗಳು' ಈ ಬಗ್ಗೆ ಪರಸ್ಪರ ಸಂವಾದಗಳಿದ್ದು ಅನೇಕ ಅಭ್ಯಾಸಿಗಳು ಗುರುಗಳೊಂದಿಗಿನ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅನೇಕ ಅನುಭವಗಳು ಮನ ಕರಗಿಸುವಂತಹವುಗಳಾಗಿದ್ದು, ಇನ್ನೂ ಗುರುಗಳನ್ನು ಭೇಟಿಮಾಡಿಲ್ಲದ ಹೊಸ ಅಭ್ಯಾಸಿಗಳಿಗೆ ಹುರುಪು ನೀಡಿತು. ಕೊನೆಯದಾಗಿ ಸಂಜೆಯ ಸತ್ಸಂಗವಿದ್ದಿತು. ನಂತರ ನಮ್ಮ ಸ್ಥಳಗಳಿಗೆ ಹೊರಟ





## ಮಹಾರಾಷ್ಟ್ರ, ಗೋವ ಪ್ರಶಿಕ್ಷಕರ ಸಮ್ಮೇಳನ

ನವೆಂಬರ್ 14ರಿಂದ 16ರವರೆಗೆ ಪುಣೆಯ ಪನ್‌ಶೆಟ್‌ನಲ್ಲಿನ ಪುನಃಚೇತನಕೇಂದ್ರದಲ್ಲಿ ಮಹಾರಾಷ್ಟ್ರ ವಲಯದ ಪ್ರಶಿಕ್ಷಕರ ಸಮ್ಮೇಳನವನ್ನು ನಿಯೋಜಿಸಲಾಗಿತ್ತು.

ನಲವತ್ತು ಪ್ರಶಿಕ್ಷಕ ಸೋದರ ಸೋದರಿಯರು ಹಾಜರಿದ್ದರು. ನವೆಂಬರ್ 15ರಂದು ವಲಯ ಸಂಚಾಲಕರಾದ ಡಾ.ಸುಭಾಷ್ ವೈದ್ಯರವರು ಅಧಿವೇಶನವನ್ನು ಆರಂಭಿಸಿದರು. ಬೆಳಗಿನಲ್ಲಿ ಎರಡು ವಿಷಯಗಳ ಪ್ರಸ್ತಾಪವಾಯಿತು : ಗುರುವಂದನೆ, ಎಂದರೆ ಮೂರು ಸದ್ಗುರುಗಳ ಕಾರ್ಯಶೀಲತೆ, ಮತ್ತು ಸಹಜಮಾರ್ಗ ಸಾಧನಾ ಪದ್ಧತಿಯ ಬಗ್ಗೆ ಪ್ರಸ್ತುತಿ. ಮಧ್ಯಾಹ್ನದ ಅಧಿವೇಶನದಲ್ಲಿ ಮೂರು ವಿಷಯಗಳ ಪ್ರಸ್ತಾಪವಿದ್ದಿತು– ಉತ್ಕಾಂಕ್ಷಿಗಳಿಗೆ ಸಹಜಮಾರ್ಗದ ಪರಿಚಯ, ಮಿಷನ್ನಿನ ಕಾರ್ಯದಲ್ಲಿ ಪ್ರಶಿಕ್ಷಕರ ಪಾತ್ರ ಮತ್ತು ಪ್ರಶಿಕ್ಷಕರ ಕೆಲಸ– ಅಭ್ಯಾಸಿಗಳಿಗೆ ಬೈಠಕ್.

ನವೆಂಬರ್ 16ರಂದು ಬೆಳಗಿನ ಅಧಿವೇಶನದಲ್ಲಿ ಪ್ರಶಿಕ್ಷಕ ಅಭ್ಯಾಸಿ ಪ್ರತಿಕ್ರಿಯೆ, ನಡವಳಿಕೆಯ ಮಾರ್ಗಸೂತ್ರಗಳು, ಆಡಳಿತಾತ್ಮಕ ಕಾರ್ಯ ಮತ್ತು ಮಿಷನ್ನಿನ ಲೆಕ್ಕಪತ್ರ ನಿರ್ವಹಣೆ.

ಅನೇಕ ಪ್ರಶಿಕ್ಷಕರು ತಮಗೆ ಆಧ್ಯಾತ್ಮಿಕ ಕಾರ್ಯದಲ್ಲಿಯೂ, ಮಿಷನ್ನಿನ ಕೆಲಸದ ಆಡಳಿತಾತ್ಮಕ ಕ್ಷೇತ್ರದಲ್ಲಿಯೂ ಪ್ರಶಿಕ್ಷಕರ ಪಾತ್ರವನ್ನು ಅರಿಯಲು ಅಧಿವೇಶನವು ನೆರವಾಯಿತೆಂದು ಅಭಿಪ್ರಾಯಪಟ್ಟರು. ಹೊಸದಾಗಿ ಪ್ರಶಿಕ್ಷಕರಾದವರಿಗೆ ತಾವು ಮೊದಲೇ ಪ್ರಶ್ನೆಗಳನ್ನು ಕೇಳಿದ್ದೇವೇನೋ ಎಂಬಂತೆ ತಮ್ಮಲ್ಲಿ ಇದ್ದ ಅನುಮಾನಗಳು ಪರಿಹಾರವಾದವು ಎಂಬುದು ಸರ್ವ ಸಮ್ಮತಾಭಿಪ್ರಾಯವಾಗಿದ್ದಿತು. ಗುರುಗಳಿಗೆ ತಮ್ಮ ಕಾರ್ಯ ನಿರ್ವಹಿಸುವವರ ಮೇಲಿರುವ ಪ್ರೇಮಭರಿತ ಎಚ್ಚರವನ್ನು ಇದು ತೋರ್ಪಡಿಸುತ್ತದೆ. ನಾವು ಅವರಿಗೆ ನಮ್ಮ ಪ್ರಾಮಾಣಿಕ ಕೆಲಸದಿಂದ ಸಂತಸ ನೀಡಲು ಶ್ರಮಿಸೋಣ.

ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ
ಜನವರಿ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 1

## ಜೋಧ್‌ಪುರ, ರಾಜಾಸ್ಥಾನದಲ್ಲಿ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಪ್ರವೇಶ





ನವೆಂಬರ್ 6ರಿಂದ 9ರವರೆಗೆ ಜೋಧ್‌ಪುರ ಕೇಂದ್ರವು ಅನೇಕ ವಿದ್ಯಾಸಂಸ್ಥೆಗಳಲ್ಲಿ ಉಪನ್ಯಾಸ ಮಾಲೆಯನ್ನು ವ್ಯವಸ್ಥೆಗೊಳಿಸಿತು. ಅವು ಲಾಲ್ ಬಹಾದೂರ್ ಶಾಸ್ತ್ರಿ ಇಂಜಿನಿಯರಿಂಗ್ ಮತ್ತು ಸಂಶೋಧನಾ ಕೇಂದ್ರ, ಮಾರ್‌ವಾರ್ ಇಂಜಿನಿಯರಿಂಗ್ ಕಾಲೇಜು ಮತ್ತು ಸಂಶೋಧನಾ ಕೇಂದ್ರ, (ವಿಷಯ ವಿಜ್ಞಾನ ಮತ್ತು ಆಧ್ಯಾತ್ಮಿಕತೆ , 150 ವಿದ್ಯಾರ್ಥಿಗಳು ಹಾಗೂ ಬೋಧಕವರ್ಗ), ಟೌನ್ ಹಾಲ್ (ವಿಷಯ: 'ಆಧ್ಯಾತ್ಮ:ಉದ್ದೇಶಪೂರಿತ ಜೀವನದ ಮಾರ್ಗ', 600 ಜನರ ಹಾಜರಿ)ಜಯನಾರಾಯಣ್ ವ್ಯಾಸ್ ವಿಶ್ವವಿದ್ಯಾಲಯ ವಿಸ್ತರಣ ಉಪನ್ಯಾಸ ವಿಭಾಗ(ವಿಷಯ: ಯೋಗ ಮತ್ತು ಸಹಜಮಾರ್ಗ, 150 ಜನ ಬೋಧಕ ವರ್ಗ) ಮತ್ತು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ(ವಿಷಯ: 'ಕಾನೂನು ಮತ್ತು ಆಧ್ಯಾತ್ಮಿಕತೆ', 150 ವಿದ್ಯಾರ್ಥಿಗಳು ಹಾಗೂ ಬೋಧಕವರ್ಗ)

ಡಾ ಕೆ.ಎಸ್. ಬಾಲಸುಬ್ರಮಣ್ಯಂ, ನಿರ್ದೇಶಕರು, ಸಹಜಮಾರ್ಗ ಸಂಶೋಧನಾ ಸಂಸ್ಥೆ, ಚೆನ್ನೈ ಇವರು ತಮ್ಮ ಉಪನ್ಯಾಸದಲ್ಲಿ ಆಧ್ಯಾತ್ಮವು ಮಾನವನ ಮನಸ್ಸಿನಲ್ಲಿ ಸೃಷ್ಟಿಯಾದ ಯಾವುದೇ ಕೃತಕ ದೇವರುಗಳಿಗೆ ಹೆಸರುಗಳನ್ನು ಆವಾಹನೆ ಮಾಡುವುದಿಲ್ಲ. ಉಪಾಧಿಗಳನ್ನು ಆರೋಪಿಸುವುದಿಲ್ಲ, ಗುಲಾಮಗಿರಿಯನ್ನು ಬೇಡುವುದಿಲ್ಲ, ಆದರೆ ಮಾನವನ ಗಮನವನ್ನು ನಾಮರಹಿತ, ಆಕಾರರಹಿತ, ಉಪಾಧಿರಹಿತನಾದ, ಎಲ್ಲ ಜೀವಿಗಳ ಆಕರನಾದ ಅನಂತನಾದ ಪರಾತ್ಪರನಲ್ಲಿಗೆ ಕೇಂದ್ರೀಕರಿಸುತ್ತದೆ. ಇಂತಹ ಈಶ್ವರೀಯ ಅನುಸಂಧಾನವು ಎಲ್ಲ ಭೂಭಾಗಗಳ, ಎಲ್ಲ ವಲಯಗಳ ಮಾನವ ಜೀವಿಗಳನ್ನು ಸಮಗ್ರಗೊಳಿಸುವ ಶಕ್ತಿಯಾಗಿ ಇಂದು ಭೇದವನ್ನುಂಟುಮಾಡುವಂತೆ ಕೊರತೆಯಾಗಿರುವಂತಹ, ಮಾನವ ಜೀವನದ ಮೂಲಭೂತ ಅಂಶವಾದ ಏಕತೆಯನ್ನು ಉಂಟುಮಾಡುತ್ತದೆ. ಪರಾತ್ಪರನೆಡೆಗೆ ಅನುಸಂಧಾನವನ್ನು ಇಂತಹ ನಮ್ರ ಚೈತನ್ಯದೊಂದಿಗೆ ವಿಶಾಲವಾಗಿ ಸಾಧನೆ ಮಾಡಿದ್ದಾದರೆ ಆಧ್ಯಾತ್ಮವು ಬಹುಷಃ ಅಂತಹ ಸಮಗ್ರತೆಯನ್ನು ತರಬಲ್ಲ ಸಮರ್ಥ ಶಕ್ತಿಯಾಗುತ್ತದೆ. ಸುಮಾರು 10-12 ಸೋದರ ಸೋದರಿಯರು ಪದ್ಧತಿಗೆ ಆಗಲೇ ಸೇರಿದ್ದು ಇದು ಮುಂದುವರಿಯುತ್ತಿದೆ.

## ಗುಜರಾತಿನಲ್ಲಿ ವಿನಿಮಯ ಕಾರ್ಯಕ್ರಮ

ಅನೇಕ ಸಣ್ಣ ಕೇಂದ್ರಗಳಲ್ಲಿ ಅಭ್ಯಾಸಿಗಳೊಂದಿಗೆ ಪ್ರತಿಸ್ಪಂದಿಸಲು ಹೊಸ ತಂಡದ ಅಗತ್ಯವಿರುವುದು ಕಂಡುಬಂದಿತು. ಮಾತುಕತೆಗಳ ನಂತರ ಒಂದು ಕೇಂದ್ರದ ಎಲ್ಲ ಅಭ್ಯಾಸಿಗಳು ಇನ್ನೊಂದು ಕೇಂದ್ರಕ್ಕೆ ಪರಸ್ಪರ ಭೇಟಿ ನೀಡಿ ಕಡೇ ಪಕ್ಷ ಅರ್ಧ ದಿನವನ್ನಾದರೂ ಕಳೆಯಬೇಕೆಂಬ ಕಾರ್ಯಕ್ರಮವನ್ನು ತೀರ್ಮಾನಿಸಲಾಯಿತು. ಇದು ಆತಿಥೇಯ ಕೇಂದ್ರದಲ್ಲಿ ಉತ್ಸಾಹ ಮತ್ತು ಹುರುಪನ್ನು ಉಂಟು ಮಾಡಲು ಪರಿಣಾಮಕಾರಿ ಮಾಧ್ಯಮವಾದುದು ಕಂಡು ಬಂದಿತು. ಅನುಕ್ರಮವಾಗಿ ಎರಡನೆಯ ಕೇಂದ್ರದ ಅಭ್ಯಾಸಿಗಳು ಮೊದಲನೆಯ ಕೇಂದ್ರಕ್ಕೆ ಮುಂದಿನ ಕೆಲವು ತಿಂಗಳಲ್ಲಿ ಭೇಟಿ ನೀಡುತ್ತಾರೆ.

ಅಭ್ಯಾಸಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವುದರಿಂದಾಗಿ ಚಿಂತನೆಗಳ ಗ್ರಹಿಕೆಗಳ ಆದಾನ ಪ್ರದಾನ ಉಂಟಾಗಿ ಸ್ಪಷ್ಟತೆ ನೆಲೆಗೊಳ್ಳುತ್ತದೆ. ಎರಡೂ ಕೇಂದ್ರಗಳ ಸದ್ವರ್ತನೆಗಳ ವಿನಿಮಯವಾಗುತ್ತದೆ. ನೆರೆಯ ಕೇಂದ್ರಗಳಿಗೆ ಒಟ್ಟಿಗೆ ಪ್ರಯಾಣಿಸುವುದರಿಂದ ಭ್ರಾತೃತ್ವ ಭಾವವು ವೃದ್ಧಿಯಾಗುತ್ತದೆ.

ಅಂತಹ ಒಂದು ಕಾರ್ಯಕ್ರಮವು ವಾಪಿಯಿಂದ 25 ಕಿ.ಮೀ ದೂರದ ದಮನ್‌ನಲ್ಲಿ ನೆರವೇರಿತು; ಅಲ್ಲಿ ಒಂದು ದಿನದ ಕಾರ್ಯಕ್ರಮಕ್ಕಾಗಿ ಸಿಲ್ವೆನ್ಸ್ (ಉಪಕೇಂದ್ರ) ಮತ್ತು ವಾಪಿಯ ಅಭ್ಯಾಸಿಗಳು ಸೇರಿದ್ದರು. ಇದು ದಕ್ಷಿಣ ಗುಜರಾತಿನಲ್ಲಿ ಸೂರತ್ ಮತ್ತು ಮುಂಬಯಿಗಳ ನಡುವೆ ಇರುವಂತಹುದು. ಇಂತಹ ವಿನಿಮಯ ಕಾರ್ಯಕ್ರಮ ನಡೆದ ಎಲ್ಲಾ ಕೇಂದ್ರಗಳಲ್ಲಿಯೂ ಖಂಡಿತವಾಗಿಯೂ ಸದಾಚಾರವಿರುವುದರಿಂದಾಗಿ ಅದು ಕೇಂದ್ರದ ಪ್ರಗತಿಗೆ ಅನುಕೂಲಕರವಾಗಿರುವುದು ಕಂಡು ಬಂದಿದೆ.

## ಅಧ್ಯಯನ ತಂಡ – ಬಲ್ಲಿಯ ಕೇಂದ್ರ



ಸತ್ಸಂಗದ ನಂತರ ಪ್ರತಿ ಭಾನುವಾರ ಒಂದು ಗಂಟೆಯ ಕಾಲ ಎಸ್ಎಮ್ಆರ್‌ಟಿಐನವರು ಒದಗಿಸಿದ ಅಧ್ಯಯನ ತಂಡದ ವಿಚಾರಗಳನ್ನು ಸದುಪಯೋಗಪಡಿಸಿಕೊಳ್ಳುವ ಉದ್ದೇಶದಿಂದ ಸೇರಿದೆವು. ನಾಲ್ಕು ಅಥವಾ ಐದು ಜನರ ಗುಂಪುಗಳನ್ನು ಆಯ್ಕೆ ಮಾಡಿ ನೀಡಲಾದ ವಿಷಯಗಳನ್ನು ಒಂದು ವಾರ ಅಧ್ಯಯನ ಮಾಡಿ ಅವರಲ್ಲೊಬ್ಬರು ಗುಂಪಿನ ಪರವಾಗಿ ಮಂಡಿಸುವರು. ವಿಷಯಗಳನ್ನು ಕ್ರಮಬದ್ಧವಾಗಿ ನಿಯೋಜಿಸಲಾಗಿದ್ದು ನಮ್ಮ ಗುರುಗಳ ಬೋಧನೆಯಂತೆ ಆಧ್ಯಾತ್ಮಿಕ ಮತ್ತು ಭೌತಿಕ ತಿಳುವಳಿಕೆಗಳನ್ನು ಒಳಗೊಂಡಿರುತ್ತದೆ. ಈ ತರಗತಿಗಳು ನವೆಂಬರ್‌ನಲ್ಲಿ ಪ್ರಾರಂಭವಾಗಿದ್ದು ಈ ಅಧ್ಯಯನದ ಫಲವಾಗಿ ಈ ಚಟುವಟಿಕೆಯಲ್ಲಿ ತೊಡಗಿರುವ ತರುಣರಲ್ಲಿ ಮಹತ್ತರ ಬದಲಾವಣೆಗಳನ್ನು ಕಾಣಬಲ್ಲವರಾಗಿದ್ದೇವೆ. ಅವರು ಸಂಜೆ ವೇಳೆ ವಾರಪೂರ ಪುಸ್ತಕಗಳಲ್ಲಿ ಹುಡುಕಿ ಭಾನುವಾರದ ಶಿಬಿರಕ್ಕೆ ಸಜ್ಜಾಗುವುದರಲ್ಲಿ ನಿರತರಾಗಿರುತ್ತಾರೆ.

ಪ್ರಾರಂಭದಲ್ಲಿ ಅನುಮಾನವಿದ್ದಿತು. ಆದರೆ ಎರಡು ವಾರಗಳ ನಂತರ ಮಾತನಾಡುತ್ತಿರುವವರು ತಾವಲ್ಲ, ತಮ್ಮ ಮೂಲಕ ಗುರುಗಳೇ ಮಾತನಾಡುತ್ತಾರೆ ಹಾಗೂ ಬೇರೆ ರೀತಿಯಲ್ಲಿ ವ್ಯರ್ಥ ಮಾಡುತ್ತಿದ್ದ ವೇಳೆಯನ್ನು ಸದುಪಯೋಗಪಡಿಸಿಕೊಳ್ಳಲು ಗುರುಗಳು ನೀಡಿದ ಸದವಕಾಶವಿದು ಎಂಬುದನ್ನು ಮನಗಂಡರು. ಪ್ರತಿಯೊಬ್ಬ ಅಭ್ಯಾಸಿಗೂ ಬದಲಾವಣೆಯಿಂದ ಅಚ್ಚರಿ ಮೂಡಿದೆ. ಇದು ಗುರುಗಳಲ್ಲಿ ತಮ್ಮ ವಿಶ್ವಾಸ ಮತ್ತು ಪ್ರೇಮವನ್ನು ಹೆಚ್ಚುವಂತೆ ಮಾಡಿದೆ.

ಒಂದು ವಾರದ ನಂತರ ಸತ್ಸಂಗಕ್ಕೆ ಬಂದ ಅಭ್ಯಾಸಿಗಳು ತಮಗೆ ವೇಳೆಯಿಲ್ಲವಾದರೆ ಹೊರಡಬಹುದೆಂದು ವಿನಂತಿಸಿದಾಗ್ಯೂ ಭಾಗಿಯಾದವರು ವಿಷಯದ ಮೇಲೆ ತಿಳಿಸುವುದನ್ನು ಆಲಿಸಲು ಉಳಿಯುತ್ತಾರೆ.

ನಮಗೆ ತಿಳುವಳಿಕೆ, ಸಹಿಷ್ಣುತೆ, ಪ್ರೇಮ ಮತ್ತು ಕ್ಷಮಾಶೀಲತೆಯನ್ನು ದಯಪಾಲಿಸಿ ಅವುಗಳನ್ನು ಪಡೆಯಲು ನಮಗೆ ಶಕ್ತಿ ನೀಡಲೆಂದು ಗುರುಗಳಲ್ಲಿ ಪ್ರಾರ್ಥಿಸುತ್ತೇವೆ.

## ನವದೆಹಲಿಯ ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮದಲ್ಲಿ ಮುಕ್ತ ಸಭೆ

ಡಿಸೆಂಬರ್ 4ರಂದು ನವದೆಹಲಿಯ ಓಕ್ಲಾ ಕೈಗಾರಿಕಾ ಕ್ಷೇತ್ರದ ರಾಷ್ಟ್ರೀಯ ಸಣ್ಣಕೈಗಾರಿಕಾ ನಿಗಮ (ಭಾರತ ಸರ್ಕಾರದ ಸಂಸ್ಥೆ)ದ ಕಛೇರಿಯಲ್ಲಿ ಮುಕ್ತ ಸಭೆ ನಡೆಸಲಾಯಿತು. ನಲವತ್ತೈದು ಪ್ರತಿನಿಧಿಗಳಲ್ಲಿ ನಿಗಮದ ಹಲವರು ಉನ್ನತ ಅಧಿಕಾರಿ ವರ್ಗದವರಿದ್ದರು.

ವಿಷಯ 'ಸಮತೋಲನದ ಅಸ್ತಿತ್ವಕ್ಕಾಗಿ ಧ್ಯಾನ.' ಸ. ಐ.ಪಿ. ಪಾಲ್ವಾರವರು ವಿಷಯದ ಕಿರುಪರಿಚಯ ಹಾಗೂ ಉಪನ್ಯಾಸಕಾರರ ಪರಿಚಯ ನೀಡಿದರು. ಸ. ಜ್ಞಾನ್ ಸರಿನ್‌ರವರು ಮೇಲೆ ಹೇಳಿದ ವಿಷಯದ ಬಗ್ಗೆ ಹಿಂದಿಯಲ್ಲಿ ಮಾತನಾಡಿದರು ಮತ್ತು ಸಹೋದರಿ ಶೋಭನರವರು ವಿಷಯವನ್ನು ಸಂಕ್ಷೇಪವಾಗಿ ಪ್ರಸ್ತಾಪಿಸುವುದರೊಂದಿಗೆ ಪದ್ಧತಿಯ ವಿವರ ನೀಡಿದರು. ಇದರ ನಂತರ ಪ್ರಶ್ನೋತ್ತರ ಸಮಾವೇಶವಿದ್ದಿತು.



ಶ್ರೀ ರಾಮಚಂದ್ರ ಮಿಷನ್
ಎಖೋಸ್ ಇಂಡಿಯ

ಜನವರಿ 2009 ಆಂತರಿಕ ಪ್ರಸಾರಕ್ಕಾಗಿ ಮಾತ್ರ ಸಂಪುಟ 2 ಸಂಚಿಕೆ 1

## ಯೋಗಾಶ್ರಮ, ತಿರುಪತಿ

ತಿರುಪತಿ ಕೇಂದ್ರವು ಮಿಶನ್ನಿನ ಪ್ರಪ್ರಥಮ ಆಶ್ರಮ ಎಂಬುದು ಮಹತ್ವದ ವಿಷಯವಾಗಿದ್ದು 2.5ಎಕರೆಗಳ ಪ್ರಮುಖ ಸ್ಥಳದಲ್ಲಿ ನಿರ್ಮಿಸಲಾಗಿದೆ. 1965ರಲ್ಲಿ ಬಾಬೂಜಿ ಮಹಾರಾಜರಿಂದ ಶಿಲಾನ್ಯಾಸ ನೆರವೇರಿ ಅಸ್ತಿತ್ವಕ್ಕೆ ಬಂದು ಏಕಪ್ರಕಾರವಾಗಿ ಬೆಳೆದು ಬಂದಿದೆ. ಆಶ್ರಮವು ಸುಂದರ ತಾಣದಲ್ಲಿದ್ದು ತಿರುಮಲ ಬೆಟ್ಟಗಳ ಮತ್ತು ಕಪಿಲ ತೀರ್ಥ ಜಲಪಾತದ ಹಿನ್ನೆಲೆಯಲ್ಲಿದೆ.

ಈ ಕೇಂದ್ರದ ಅಭ್ಯಾಸಿಗಳು, ಈ ಕೇಂದ್ರದ ಪ್ರಥಮ ಪ್ರಶಿಕ್ಷಕರಾಗಿದ್ದ ಡಾ. ಕೆ.ಸಿ.ವರದಾಚಾರಿ ಅವರಿಂದ ಅತ್ಯುತ್ತಮ ಆಧ್ಯಾತ್ಮಿಕ ತರಬೇತಿ ಪಡೆದರು. ಪೂಜ್ಯ ಬಾಬೂಜಿಯವರು ಈ ಕೇಂದ್ರವು ಪ್ರಾರಂಭವಾದಾಗಿನಿಂದ ಪ್ರತಿವರ್ಷವೂ ತಮ್ಮ ದಕ್ಷಿಣ ಭಾರತದ ಪ್ರವಾಸದಲ್ಲಿ ತಪ್ಪದೆ ಈ ಕೇಂದ್ರಕ್ಕೆ ಭೇಟಿಯಿತ್ತರು. ತಿರುಪತಿ ಕೇಂದ್ರದ ರಜತಮಹೋತ್ಸವವನ್ನು 1990ರಲ್ಲಿ ಆಚರಿಸಲಾಯಿತು; ಆಗ ಪೂಜ್ಯ ಗುರುಗಳು ಸಮಾರಂಭದಲ್ಲಿ ಪಾಲ್ಗೊಂಡು ಅಭ್ಯಾಸಿಗಳನ್ನು ಅನುಗ್ರಹಿಸಿದ್ದರು.

ಡಾ. ಸಿ. ರಾಜೇಶ್ವರಿಯವರಿಂದ ದಾನಮಾಡಲ್ಪಟ್ಟ ಚಿಕ್ಕ ಕಟ್ಟಡದಿಂದ 1965ರಲ್ಲಿ ಪ್ರಾರಂಭವಾದ ಕೇಂದ್ರವು ಏಕಪ್ರಕಾರವಾಗಿ ವಿಸ್ತಾರಗೊಂಡಿದೆ. ಪೂಜ್ಯ ಗುರುಗಳು 1994ರಲ್ಲಿ ಹೊಸ ಧ್ಯಾನ ಮಂದಿರವನ್ನು ಉದ್ಘಾಟಿಸಿದರು, ಇದರಲ್ಲಿ ಸುಮಾರು ಸಾವಿರ ಅಭ್ಯಾಸಿಗಳಿಗೆ ಅವಕಾಶವಿರುತ್ತದೆ.

ಸಹಜಮಾರ್ಗ ಸಂಶೋಧನಾ ಸಂಸ್ಥೆಯನ್ನು 1984ರ ಡಿಸೆಂಬರ್‌ನಲ್ಲಿ ಮೊದಲ ಬಾರಿಗೆ ತಿರುಪತಿಯಲ್ಲಿ ಸಂಸ್ಥಾಪಿಸಲಾಯಿತು. ಈ ಕೇಂದ್ರದಲ್ಲಿ ಪ್ರಸ್ತುತ 900 ಅಭ್ಯಾಸಿಗಳಿದ್ದಾರೆ. ಅನೇಕ ಕಾರ್ಯಕ್ರಮಗಳನ್ನೂ ವ್ಯವಸ್ಥಿತವಾಗಿ ನಡೆಸಲಾಗುತ್ತದೆ.

ಆಶ್ರಮದಲ್ಲೊಂದು ಸುಸಜ್ಜಿತ ಗ್ರಂಥಾಲಯವಿದ್ದು ಎಲ್ಲ ದಿನಗಳೂ ತೆರೆದಿರುತ್ತದೆ. ಅನೇಕ ಅಭ್ಯಾಸಿಗಳು ಮಿಷನ್ನಿನ ಸಾಹಿತ್ಯವನ್ನು ಓದಲು ಈ ಸೌಲಭ್ಯವನ್ನು ಬಳಸಿಕೊಳ್ಳುತ್ತಾರೆ. ಮಕ್ಕಳಿಗೆ ಒಳಗೆ ಮತ್ತು ಹೊರಗೆ ಆಡಲು ವ್ಯವಸ್ಥೆಗಳಿವೆ. ಹೊಸ ಉತ್ಕಾಂಕ್ಷಿಗಳಿಗಾಗಿ ಭಾನುವಾರಗಳು ಸ್ವಾಗತ ವ್ಯವಸ್ಥೆಯಿದ್ದು ಅವರಿಗೆ ಪದ್ಧತಿ ಮತ್ತು ಮಿಷನ್ನಿನ ಪರಿಚಯ ನೀಡಲಾಗುತ್ತದೆ.

ಈ ಕೇಂದ್ರದ ಅಭ್ಯಾಸಿಗಳು ಆಶ್ರಮದ ಅನೇಕ ರೀತಿಯ ಸ್ವಯಂ ಸೇವೆಗಳಲ್ಲಿ ಚಟುವಟಿಕೆಯಿಂದ ಪಾಲ್ಗೊಳ್ಳುತ್ತಾರೆ.

From the Archives





Meditation Hall



Library



Driveway



First Building



Children's Area

To subscribe to this Newsletter please visit http://www.srcm.org/centers/as/in/newsletter/index.jsp
For feedback, suggestions and news articles please send email to in.newsletter@srcm.org

© 2008 Shri Ram Chandra Mission ("SRCM"). All rights reserved.
“Shri Ram Chandra Mission", "Sahaj Marg", “SRCM”, “Constant Remembrance” and the Mission's Emblem are registered Trademarks of Shri Ram Chandra Mission.
This Newsletter is intended exclusively for the members of SRCM.